1943

ಶಿವಾನುಭವ ಗ್ರಂಥಮಾಲಾ ನಂ. ೧೦.

ಭಕ್ತಿಯ ವಚನಗಳು.

Q234:4196
33Hal
6785

ಸಂಪಾದಕರು

ರಾ। ಬ। ಫ. ಗು. ಹಳಕಟ್ಟಿ

ಬಿ. ಎ. ಎಲ್. ಎಲ್. ಬಿ.

ವಿಜಾಪುರ.

The ... College

೧೯೪೩.

(ಇದರ ಯಾವತ್ತು ಅಧಿಕಾರವು ಕಾದಿಡಲ್ಪಟ್ಟಿದೆ.)

ಬೆಲೆ ೦-೧೦-೦

Axn
115

6785

ಇದನ್ನು ವಿಜಾಪುರದಲ್ಲಿ
ರಾ॥ ಬ॥ ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ೧೬೨೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

The Vijay College
LIBRARY
VIJAY COLLEGE,
BIJAPUR.

ಪ್ರಸ್ತಾವನೆ.

ಶಿವಶರಣರ ತತ್ವಗಳನ್ನು ಅಭ್ಯಾಸ ಮಾಡಲಪೇಕ್ಷಿಸುವವರು ಈ ಪುಸ್ತಕವು ಪ್ರಾರಂಭದ ಗ್ರಂಥವೆಂದು ಭಾವಿಸಿ ಅವರು ಹಾಗೆ ಇದರ ಉಪಯೋಗವನ್ನು ಮಾಡಿಕೊಳ್ಳಬಹುದಾಗಿದೆ. ಇದರಲ್ಲಿಯ ವಚನಗಳು ಭಕ್ತಿಯ ಸ್ವರೂಪನ್ನು ಬಹು ಚನ್ನಾಗಿ ನಿರೂಪಿಸುತ್ತವೆ. ಭಕ್ತಿಗೆ ಸಂಬಂಧಿಸಿದ ವಿಷಯುಗಳು ಬಹುತರವಾಗಿ ಎಲ್ಲರಿಗೂ ಪರಿಚಿತವಾದವುಗಳು. ಆದರೂ ಅವುಗಳ ವಿವೇಚನೆಗಳು ಅನೇಕ ವಿಧವಾಗಿವೆ. ಈ ಮಹತ್ವದ ವಿಷಯವಾಗಿ ಬಸವೇಶ್ವರನ ವಿಚಾರಗಳಾವವೆಂಬುದನ್ನು ಈಗಿನ ಗ್ರಂಥದಿಂದ ವಾಚಕರು ಚನ್ನಾಗಿ ಅರಿತುಕೊಳ್ಳಬಹುದಾಗಿದೆ.

ನಾವು ಬಸವೇಶ್ವರನ ಒಂದು ನೂರು ವಚನಗಳನ್ನು ಆಯ್ದು ಈ ಗ್ರಂಥದಲ್ಲಿ ಕೊಟ್ಟಿದ್ದೇವೆ. ಅವನ ನಿರೂಪಣೆಯು ಯಾವಾಗಲೂ ಮೋಹಕವಾದುದು. ಅವನ ಭಾಷೆಯಾದರೂ ಅತ್ಯಂತ ಮೃದುವಾದದು. ಮೃದುವಿದ್ದರೂ ಅವನ ವಿಚಾರಗಳು ಅತ್ಯಂತ ಸ್ಪಷ್ಟವಾದವುಗಳು ಮತ್ತು ನಿರ್ದಾಕ್ಷಿಣ್ಯವಾಗಿ ಹೇಳಿದವುಗಳು. ಆದ್ದರಿಂದ ವಚನಗಳ ಅಭ್ಯಾಸದ ಆರಂಭದಲ್ಲಿ ಅವನ ವಚನಗಳನ್ನೇ ಆಯ್ದು ಇಲ್ಲಿ ಕೊಟ್ಟಿದ್ದೇವೆ.

ಇದರಲ್ಲಿಯ ಪ್ರತಿಯೊಂದು ವಚನದಲ್ಲಿ ಬರುವ ಕಠಿಣ ಶಬ್ದಗಳ ಅರ್ಥವನ್ನೂ ವಚನದ ಭಾವವನ್ನೂ ಅದರ ಕೆಳಗೆಯೇ ಕೊಟ್ಟಿದ್ದೇವೆ. ವಾಚಕರು ಅವುಗಳ ಸಹಾಯದಿಂದ ಮೂಲ ವಚನವನ್ನೇ ಅಭ್ಯಾಸಿಸಿ ಅದರ ಸ್ವಾದವನ್ನು ಅರಿಯಲು ಪ್ರಯತ್ನಿಸಬೇಕೆಂದು ನಮ್ಮ ಸವಿನಯ ಸೂಚನೆ ಇದೆ.

ವಿಜಾಪುರ
ತಾ. ೧-೮-೪೩.

ಫ. ಗು. ಹಳಕಟ್ಟಿ
ಸಂಪಾದಕ.

ವಿಷಯಾನುಕ್ರಮಣಿಕೆ.

೧. ಭಕ್ತಿಯುಳ್ಳವನಾಗಿರು ೧

೨. ನಿಷ್ಕಪಟ ಭಕ್ತಿಯುಳ್ಳವನಾಗಿರು ... ೫

೩. ಶುದ್ಧಮನಸ್ಸುಳ್ಳವನಾಗಿರು ೮

೪. ಪರಮಾತ್ಮನ ಧ್ಯಾನ ೧೬

೫. ಆತ್ಮಾರ್ಪಣ ೧೯, ೪೫

೬. ಪರಮಾತ್ಮನ ಕಾರುಣ್ಯ ೨೩

೭. ಪರಮಾತ್ಮನ ರಕ್ಷಣೆಯನ್ನು ಬೇಡು ... ೩೧

೮. ಪರಮಾತ್ಮನ ಕ್ಷಮೆಯನ್ನು ಬೇಡು ... ೩೪

೯. ನನ್ನ ಅವಗುಣಗಳನ್ನು ದೂರಮಾಡಬೇಕೆಂದು ಪ್ರಾರ್ಥಿಸು ೩೭

೧೦. ಶರಣರನ್ನು ಅವಲಂಬಿಸು ೪೧

ಭಕ್ತಿ.

ಭಕ್ತಿಯುಳ್ಳವನಾಗಿರು.

(೧) ನಾದಪ್ರಿಯ ಶಿವನೆಂಬರು. ನಾದಪ್ರಿಯ ಶಿವನಲ್ಲಯ್ಯ. ವೇದಪ್ರಿಯ ಶಿವನೆಂಬರು. ವೇದಪ್ರಿಯ ಶಿವನಲ್ಲಯ್ಯ. ನಾದವ ಮಾಡಿದ ರಾವಣಂಗೆ ಅರೆಯಾಯುಷ್ಯವಾಯಿತ್ತು. ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು. ನಾದಪ್ರಿಯನು ಅಲ್ಲ. ವೇದಪ್ರಿಯನು ಅಲ್ಲ. ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ.

ಅರೆಯಾಯುಷ್ಯ = ಅರ್ಧ ಆಯುಷ್ಯ.

ಭಾವಃ— ನಾದವೆಂದರೆ ಓಂಕಾರ ಪ್ರಣವು. ಈ ಪ್ರಣವದಿಂದ ಪಂಚಾಕ್ಷರ ಮಹಾಮಂತ್ರವು ಉತ್ಪನ್ನವಾಗುತ್ತದೆ. ಈ ಪಂಚಾಕ್ಷರವನ್ನು ಜಪಿಸಿದರೆ ಪರಮಾತ್ಮನು ಒಲಿಯುತ್ತಾನೆಂಬ ತತ್ವವಿದೆ. ಆದರೆ ಇದು ನಿಜವಲ್ಲವೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ. ಯಾಕಂದರೆ ರಾವಣನು ಪಂಚಾಕ್ಷರ ಮಂತ್ರವನ್ನರಿತರೂ ಕೂಡ ಅವನು ತನ್ನ ಆಯುಷ್ಯದಲ್ಲಿ ಅರ್ಧವನ್ನು ಕಳೆದುಕೊಂಡನು ಮತ್ತು ರಾಮನಿಂದ ಹತನಾದನು. ಹಾಗೆಯೇ ವೇದಗಳನ್ನು ಹುಟ್ಟಿಸಿದ ಬ್ರಹ್ಮನೂ ತನ್ನ ಒಂದು ಶಿರಸ್ಸನ್ನು ಕಳೆದುಕೊಂಡನು. ಇವರಲ್ಲಿ ಭಕ್ತಿ ಇಲ್ಲದ ಮೂಲಕ ಹೀಗಾಯಿತು. ಆದ್ದರಿಂದ ಪರಮಾತ್ಮನು ನಾದಪ್ರಿಯನು ಅಲ್ಲ, ವೇದಪ್ರಿಯನು ಅಲ್ಲ, ಅವನು ಭಕ್ತಿಪ್ರಿಯನೆಂದು ಬಸವೇಶ್ವರನು ಇಲ್ಲಿಹೇಳುತ್ತಾನೆ. ಅಂದರೆ ವೇದಶಾಸ್ತ್ರಾದಿಗಳನ್ನು ಅಭ್ಯಾಸ ಮಾಡುವಲ್ಲಿ ಮತ್ತು ಜಪಾದಿಗಳನ್ನು ಮಾಡುವಲ್ಲಿ ಭಕ್ತಿ ಬೇಕು ಎಂದು ಬಸವೇಶ್ವರನ ಮುಖ್ಯ ಅಭಿಪ್ರಾಯವು. ಭಕ್ತಿಯಿಂದಲೇ ಪರಮಾತ್ಮನು ಒಲಿಯುತ್ತಾನೆ.

(೨) ಹೊಲಬುಗೊಂಡರಸಲು ಬೇಡ. ಬಲಿತು ಕರಬೇಡ. ಒಲಿದೊಮ್ಮೆ ಶಿವಶರಣೆನ್ನಿರಯ್ಯಾ. ಒಂದು ಸೊಕ್ಕಿಂಗೆ ಮುಕ್ತಿ ಸಿದ್ಧಿ, ಕೂಡಲ ಸಂಗಮದೇವ ಭಕ್ತಿಲಂಪಟನಾಗಿ.

ಹೊಲಬುಗೊಂಡು = ಉದ್ದೇಶವನ್ನಿಟ್ಟುಕೊಂಡು; ಅರಸಲುಬೇಡ = ಹುಡುಕಬೇಡ; ಬಿಲಿತು = ಬೆಲೆಗೈದು; ಸೊಲ್ಲು = ನುಡಿ; ಒಲಿದು = ಪ್ರೀತಿಯಿಂದ.

ಭಾವಃ— ಕೆಲವೊಂದು ಉದ್ದೇಶವನ್ನಿಟ್ಟುಕೊಂಡು ಪರಮಾತ್ಮನನ್ನು ಹುಡುಕಬಾರದು ಅಥವಾ ಭಕ್ತಿಯು ಕ್ರಯಕ್ಕೆ ಬರುವದೆಂದು ತಿಳಿದು ಹಣ ವೆಚ್ಚ ಮಾಡಿ ಪರಮಾತ್ಮನ ಕಾರ್ಯಗಳನ್ನು ಮಾಡಲಿಕ್ಕೆ ಹೋಗಬಾರದು. 'ಪರಮಾತ್ಮನೇ, ನಿನಗೆ ಶರಣು' ಎಂಬ ಶಬ್ದಗಳಲ್ಲಿ ಮುಕ್ತಿ ಇದೆ. ಆದರೆ ಈ ಶಬ್ದಗಳನ್ನು ಭಕ್ತಿಯಿಂದ ಮಾತ್ರ ಉಚ್ಚರಿಸಬೇಕು. ಯಾಕಂದರೆ ಪರಮಾತ್ಮನು ಭಕ್ತಿಗೆ ಮೆಚ್ಚಿದವನಾಗಿರುತ್ತಾನೆ.

(೩) ನಂಬರು, ನೆಚ್ಚರು. ಬರಿದೆ ಕರೆವರು. ನಂಬಲರಿಯರೀ ಲೋಕದ ಮನುಜರು. ನಂಬಿ ಕರೆದಡೆ 'ಓ' ಎನ್ನನೇ ಶಿವನು? ನಂಬದೆ ನೆಚ್ಚದೆ ಬರಿದೆ ಕರೆವರ ಕೊಂಬೆ ಮೆಟ್ಟಿ ಕೂಗೆಂದ ಕೂಡಲಸಂಗಮದೇವ.

ಬರಿದೆ = ವ್ಯರ್ಥವಾಗಿ.

ಭಾವಃ— ಜನರು ಪರಮಾತ್ಮನಲ್ಲಿ ಭಕ್ತಿಯನ್ನಿಡದೆ ವ್ಯರ್ಥವಾಗಿ ಅವನ ಹೆಸರನ್ನು ತೆಗೆದುಕೊಂಡು ಕೂಗುತ್ತಾರೆ. ಆದರೆ ಅವರಲ್ಲಿ ಭಕ್ತಿ ಎಂಬುದು ಏನೂ ಇರುವದಿಲ್ಲ. ಭಕ್ತಿ ಎಂದರೆ ಪರಮಾತ್ಮನಲ್ಲಿ ನಂಬಿಗೆ ಅಥವಾ ವಿಶ್ವಾಸ. ಈ ವಿಶ್ವಾಸವಿಲ್ಲದೆ ಪರಮಾತ್ಮನ ಹೆಸರು ತೆಗೆದುಕೊಳ್ಳುವಂಥವರು ಗಿಡದ ಕೊಂಬೆಯ ಮೇಲೇರಿ ಕೂಗಿದರೂ ಕೂಡ ಅವರ ಕೂಗು ಪರಮಾತ್ಮನಿಗೆ ಕೇಳಿಸಲಾರದು. ಆದರೆ ನಂಬಿಯಕ್ಕನು ಅತ್ಯಂತ ನಂಬಿಗೆಯಿಂದ ಪರಮಾತ್ಮನ ಹೆಸರನ್ನು ತೆಗೆದುಕೊಂಡು ಅವನನ್ನು ಕರೆದಳು. ಆದ್ದರಿಂದ ಆಕೆಯು ಹೀಗೆ ಕರೆದ ಕೂಡಲೆ ಅವನು 'ಓ' ಎಂದು ಆಕೆಗೆ ಉತ್ತರ ಕೊಟ್ಟನು. ಇದು ಭಕ್ತಿಯ ಪ್ರಭಾವವು.

(೪) ಒಂದು ಮಾತೆನ್ನಬಹುದೇ ಶಬ್ದ ಸಾರಾಯವನು? ಒಂದು ಮಾತೆನ್ನಬಹುದೇ ಶರಣಸಂಬಂಧವನು? ಕೂಡಲಸಂಗಮದೇವರು ನಂಬಿಗೆ 'ಓ' ಎಂದುದನೊಂದು ಮಾತೆನ್ನಬಹುದೇ?

ಸಾರಾಯ = ತಿರುಳು, ಸಾರ.

ಭಾವಃ— ಒಂದು ಸೊಲ್ಲಿಗೆ ಮುಕ್ತಿ ಎಂದು ಬಸವೇಶ್ವರನು ಹಿಂದೆ ಹೇಳಿದ್ದಾನೆ. ಆದರೆ ಹೀಗೆ ಕರೆದ ಈ ಒಂದು ಮಾತು ಏನೋ ಒಂದು ಶಬ್ದವೆಂದು ನೀವು ಭಾವಿಸಬೇಡಿರೆಂದು ಇಲ್ಲಿ ಅವನು ಎಚ್ಚರು ಹೇಳುತ್ತಾನೆ. ಅದು ಶಬ್ದದ ತಿರುಳು ಅಥವಾ ಸಾರವೆಂದು ತಿಳಿಯಬೇಕು. ವಿಚಾರ ಮಾಡಿದಲ್ಲಿ ಶಬ್ದದಲ್ಲಿ ಶಕ್ತಿ ಇದೆ. ಅಂಥ ಶಕ್ತಿ ಎಲ್ಲವೂ ಭಕ್ತಿಯಿಂದ ಉಚ್ಚರಿಸಿದ ಈ ಒಂದು ಮಾತಿನಲ್ಲಿ ಕೇಂದ್ರೀಕರಿಸಲ್ಪಟ್ಟಿರುತ್ತದೆಂದು ಅವನ ಅಭಿಪ್ರಾಯವು. ಶರಣನು ಪರಮಾತ್ಮನಿಗೆ ಸಂಬಂಧಿಸಿದವನು. ಆದ್ದರಿಂದ ಅವನು ಭಕ್ತಿಯಿಂದ ಇದರ ಉಚ್ಚಾರವನ್ನು ಮಾಡುತ್ತಾನೆ. ನಂಬಿಯು ಇಂಥ ಒಬ್ಬ ಶಿವಶರಣಳು. ಆದ್ದರಿಂದ ಅವಳು ಕರೆದದ್ದು ಏನೋ ಒಂದು ಮಾತು ಎಂಬ ಭಾವಿಸಬಾರದು.

(೫) ನೆರೆ ನಂಬೋ, ನೆರೆ ನಂಬೋ, ದರದುರವಿಲ್ಲದೆ ಸಾಮವೇದಿಗಳಂತೆ. ನೆರೆ ನಂಬೋ, ನೆರೆ ನಂಬೋ, ದಾಸ ದುಗ್ಗಳೆಯಂತೆ. ನೆರೆ ನಂಬೋ, ನೆರೆ ನಂಬೋ, ಸಿರಿಯಾಳ ಚಂಗಳೆಯಂತೆ. ನೆರೆ ನಂಬೋ, ನೆರೆ ನಂಬೋ, ಸಿಂಧುಬಲ್ಲಾಳನಂತೆ. ನಂಬಿದೆಯಾದರೆ, ತನ್ನನೀವ ಕೂಡಲಸಂಗಮದೇವ.

ದರದುರ = ಶಂಕೆ, ಸಂದೇಹ; ನೆರೆ = ಪೂರ್ಣವಾಗಿ; ಈವ = ಕೊಡುವನು.

ಭಾವಃ— ಬಸವೇಶ್ವರನು ಪರಮಾತ್ಮನನ್ನು ವಿಶ್ವಾಸದಿಂದ ನಂಬಿ ಶ್ರೇಷ್ಠ ಪದವಿಯನ್ನು ಹೊಂದಿದ ಶಿವಶರಣರ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಟ್ಟಿದ್ದಾನೆ. ಅವರು ಸಾಮವೇದಿ-ಶ್ವಪಚಯ್ಯಗಳು, ದೇವರದಾಸಿಮಯ್ಯ-ದುಗ್ಗಳೆಯರು, ಸಿರಿಯಳ--ಚಂಗಳೆಯರು ಮತ್ತು ಸಿಂಧುಬಲ್ಲಾಳ ಇವರು ಇದ್ದು ಅವರು ಹೇಗೆ ಪರಮಾತ್ಮನನ್ನು ನಂಬಿದರೋ ಹಾಗೆಯೇ ನಂಬಬೇಕೆಂದು ಅವನು ಇಲ್ಲಿ ಹೇಳುತ್ತಾನೆ. ಹೀಗೆ ನಂಬಿದಲ್ಲಿ ಪರಮಾತ್ಮನು ಆಳಾಗಿ ನಿಮ್ಮಗೋಸ್ಕರ ದುಡಿಯುತ್ತಾನೆಂದು ಅವನು ಇಲ್ಲಿ ಹೇಳುತ್ತಾನೆ.

(೬) ವ್ಯಾಧನೊಂದು ಮೊಲನ ತಂದರೆ, ಸಲುವ ಹಾಗಕ್ಕೆ ಬಿಲಿವರಯ್ಯಾ! ನೆಲೆಸಾಳ್ವನ ಹೆಣನೆಂದರೆ, ಒಂದಡಿಕೆಗೆ ಕೊಂಬುವರಿಲ್ಲ ನೋಡಯ್ಯಾ! ಮೊಲನಿಂದ ಕರಕಷ್ಟ ನರನ ಬಾಳುವೆ. ಸಲೆ ನಂಬೋ ನಮ್ಮ ಕೂಡಲ ಸಂಗಮದೇವನ.

ವ್ಯಾಧ = ಬೇಟೆಗಾರ; ಹಾಗ = ಒಂದು ತರದ ನಾಣ್ಯ; ಬಿಲಿ = ಬೆಲೆಗಟ್ಟು; ನೆಲನಾಳ್ವ = ನೆಲವನ್ನು ಆಳುವವ, ಅರಸು; ಕರಕಷ್ಟ = ಅತ್ಯಂತ ಕೀಳುತರದ್ದು.

ಭಾವಃ— ಬೇಟೆಗಾರನು ಬೇಟೆಯಾಡಿ ಒಂದು ಮೊಲವನ್ನು ತಂದು ಪೇಟೆಯಲ್ಲಿರಿಸಿದರೆ, ಅದನ್ನು ಒಂದು ಕ್ರಯಕ್ಕೆ ತೆಗೆದುಕೊಳ್ಳುವ ಜನರು ಯಾರಾದರೂ ದೊರೆಯುತ್ತಾರೆ. ಆದರೆ ಮನುಷ್ಯ ಪ್ರಾಣಿಯು ಸತ್ತ ಬಳಿಕ ಅವನ ಹೆಣವನ್ನು ಪೇಟೆಯಲ್ಲಿಟ್ಟು ಮಾರ ಹೋದರೆ, ಅದನ್ನು ತೆಗೆದುಕೊಳ್ಳುವವರು ಒಬ್ಬರೂ ದೊರೆಯಲಾರರು. ಅರಸನ ಹೆಣವೆಂದರೂ ಕೂಡ ಯಾರೂ ತೆಗೆದುಕೊಳ್ಳುವದಿಲ್ಲ. ಇದರಿಂದ ಮನುಷ್ಯನ ದೇಹವು ಮೊಲನ ಶರೀರಕ್ಕಿಂತಲೂ ಬಹಳ ಕಡಿಮೆ ಬೆಲೆಯುಳ್ಳದ್ದೆಂದು ತಿಳಿಯುತ್ತಿದೆ. ಜನರು ಇಂಥ ಶರೀರಕ್ಕೆ ಮಹತ್ವ ಕೊಟ್ಟು ಪರಮಾತ್ಮನನ್ನು ಅವರು ಮರೆಯಬಾರದೆಂದು ಹೇಳುವದೇ ಬಸವೇಶ್ವರನ ಮುಖ್ಯಾಭಿಪ್ರಾಯವಿದೆ.

(೭) ಚಂದ್ರಕಾಂತದ ಸಿಲೆಯಲ್ಲಿ ಜಲವಿಲ್ಲದನ್ನಕ್ಕ ಶೈತ್ಯವ ತೋರುವ ಪರಿ ಎಂತೋ? ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಇಲ್ಲದನ್ನಕ್ಕ ಉಷ್ಣವ ತೋರುವ ಪರಿ ಎಂತೋ? ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ, ಕೂಡಲಸಂಗನನರಿವ ಪರಿ ಎಂತೋ?

ಭಾವಃ— ಚಂದ್ರಕಾಂತದಲ್ಲಿ ಶೈತ್ಯವು ಮತ್ತು ಸೂರ್ಯಕಾಂತದಲ್ಲಿ ಉಷ್ಣತೆಯು ಹುದುಗಿಕೊಂಡಿರುತ್ತವೆ. ಅವುಗಳು ಹೀಗೆ ಆ ಸಿಲೆಗಳಲ್ಲಿ ಇರುವದರಿಂದಲೇ ಚಂದ್ರ ಮತ್ತು ಸೂರ್ಯರ ಕಿರಣಗಳು ಅವುಗಳ ಮೇಲೆ ಪರಿಣಾಮ ಮಾಡುತ್ತವೆ. ಅವಿಲ್ಲದೆ ಹೋದರೆ ಆ ಕಿರಣಗಳು ಅವುಗಳ ಮೇಲೆ ಏನೂ ಪರಿಣಾಮ ಮಾಡಲಾರವು. ಹಾಗೆಯೇ ಭಕ್ತಿ ಎಂಬುದು ಮನುಷ್ಯನಲ್ಲಿ ಇರಬೇಕು. ಅದು ಇದ್ದರೆ ಮಾತ್ರ ಪರಮಾತ್ಮನ ಜ್ಞಾನವಾಗುತ್ತದೆ. ಇಲ್ಲದಿದ್ದರೆ ಪರಮಾತ್ಮನ ಜ್ಞಾನವಾಗಲಾರದು.

(೮) ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲುಹುತ್ತ, 'ಶಿವ, ಶಿವಾ' ಎಂದೋದಿಸಯ್ಯ. ಭಕ್ತಿ ಎಂಬ ಪಂಜರದೊಳಗಿಕ್ಕಿ ಸಲಹು ಕೂಡಲಸಂಗಮದೇವ.

ನರವಿಂಧ್ಯ = ಮನುಷ್ಯರಿದ್ದ ದಟ್ಟ ಅಡವಿ; ಹುಲು = ಕ್ಷುದ್ರ.

ಭಾವಃ— ಬಸವೇಶ್ವರನು ಭಕ್ತಿಯ ಮಹತ್ವವನ್ನು ಹೀಗೆ ಹೇಳಿ ಇಂಥ ಭಕ್ತಿಯನ್ನು ತನಗೆ ಕೊಡಬೇಕೆಂದು ಪರಮಾತ್ಮನನ್ನು ಇಲ್ಲಿ ಬೇಡಿಕೊಳ್ಳುತ್ತಾನೆ. ಅವನು ಅನ್ನುವದೇನೆಂದರೆ, ಇಂಥ ಭಕ್ತಿಯು ಘನತರವಾದದ್ದು, ಸದಾ ಆನಂದವನ್ನು ಕೊಡುವಂಥಾದ್ದು. ಆದ್ದರಿಂದ ಪರಮಾತ್ಮನನ್ನು ಧ್ಯಾನಿಸುತ್ತ ಅವನ ಹೆಸರನ್ನು ಹೇಳುತ್ತ ಇರುವಂತೆ ಮಾಡಬೇಕೆಂದು ಅವನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ. ಒಂದು ಗಿಳಿಯು ಹೇಗೆ ದೇವರ ನಾಮೋಚ್ಚಾರವನ್ನು ಮಾಡುತ್ತ ಪಂಜರದಲ್ಲಿ ಕಾಲ ಕಳೆಯುತ್ತದೆಯೋ ಹಾಗೆಯೇ ಭಕ್ತಿ ಎಂಬ ಪಂಜರದಲ್ಲಿ ನನ್ನನ್ನು ಇಟ್ಟು 'ಶಿವ, ಶಿವಾ' ಎಂದು ಓದಿಸುತ್ತ ನರರೆಂಬ ವೃಕ್ಷಗಳಿಂದ ತುಂಬಿದ ಈ ಘೋರಾರಣ್ಯದಲ್ಲಿದ್ದು ಕಾಲಕಳೆಯುವಂತೆ ಮಾಡೆಂದು ಅವನು ದೇವರಲ್ಲಿ ಪ್ರಾರ್ಥಿಸುತ್ತಾನೆ.

ನಿಷ್ಕಪಟ ಭಕ್ತಿಯುಳ್ಳವನಾಗಿರು.

(೯) ಭಕ್ತಿ ಎಳ್ಳೆನಿತಿಲ್ಲ. ಯುಕ್ತಿಶೂನ್ಯನಯ್ಯ ನಾನು. ತನುವಂಚಕ ಮನವಂಚಕ ಧನವಂಚಕ ನಾನಯ್ಯ! ಕೂಡಲಸಂಗಮದೇವ ಮಳಲೊಟ್ಟಿಲೆನ್ನ ಮಾತು.

ಎಳ್ಳೆನಿತು = ಎಳ್ಳಷ್ಟು; ಮಳಲೊಟ್ಟಿಲು = ಮಳಲು+ಒಟ್ಟಿಲು: ಮಳಲು = ಉಸಿಕು; ಒಟ್ಟಿಲು = ರಾಶಿ, ಗುಂಪೆ.

ಭಾವಃ— ನನ್ನಲ್ಲಿ ಭಕ್ತಿಯು ಎಳ್ಳಷ್ಟೂ ಇಲ್ಲ. ಸಂಸಾರದಿಂದ ಮುಕ್ತನಾಗುವದಕ್ಕೋಸ್ಕರ ನಾನು ಯಾವ ಹಂಚಿಕೆಯನ್ನೂ ಮಾಡಿಕೊಂಡಿಲ್ಲ. ನನ್ನ ತನು, ಮನ, ಧನಗಳಲ್ಲಿ ಎಷ್ಟು ಮಾತ್ರವೂ ಕಡಿಮೆ ಮಾಡಿಕೊಳ್ಳಲು ಇಚ್ಛಿಸದೆ ಜನರನ್ನು ವಂಚಿಸುವದಕ್ಕೋಸ್ಕರ ಅವುಗಳನ್ನು ಉಪಯೋಗಿಸುತ್ತಾ ಇದ್ದೇನೆ. ನಾನು ಬರೀ ಮಾತುಗಾರಿಕೆಯಲ್ಲಿ ಕಾಲಕಳೆಯುತ್ತಾ ಇದ್ದೇನೆ. ನನ್ನ ಮಾತುಗಳೆಲ್ಲ ಬರೀ ಉಸುಕಿನ ಗುಂಪೆಗಳು. ಅವುಗಳಲ್ಲಿ ಸ್ಥಿರತ್ವವಿಲ್ಲ.

(೧೦) ಒಂದುವನರಿಯದ ಸಂದೇಹಿ ನಾನಯ್ಯಾ. ನಂಬುಗೆ ಇಲ್ಲದ ಡಂಭಕ ನಾನಯ್ಯ. ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಕೂಡಲಸಂಗಮದೇವ.

ಡಿಂಗರಿಗ = ಸೇವಕ.

ಭಾವಃ — ನನಗೆ ಏನೂ ಗೊತ್ತಿಲ್ಲದೆ, ಬರೀ ಸಂದೇಹದಲ್ಲಿ ಕೊಳೆಯುತ್ತಲಿದ್ದೇನೆಂದು ಬಸವೇಶ್ವರನು ಅನ್ನುತ್ತಾನೆ. ಅಂದರೆ ನಾನು ಅನೇಕ ಚರ್ಚೆಗಳನ್ನೂ ವಿವಾದಗಳನ್ನು ಮಾಡುತ್ತ ಕಾಲಕಳೆಯುತ್ತಲಿದ್ದೇನೆಂದು ಅವನ ಭಾವವು. ಪರಮಾತ್ಮನಲ್ಲಿ ವಿಶ್ವಾಸವಿಟ್ಟು ನಡೆಯುವದೆಂಬುದು ನನಗೆ ಏನೂ ಗೊತ್ತು ಇಲ್ಲ. ನಾನು ಕೇವಲ ಡಂಭಾಚಾರಿಯು. ಆದರೆ ಜಗತ್ತಿನಲ್ಲಿ ಪರಮಾತ್ಮನನ್ನು ನಂಬಿದ ಶರಣರಿದ್ದಾರೆ. ಅಂಥವರ ಸಮೀಪದಲ್ಲಿದ್ದುಕೊಂಡು ಅವರ ಸೇವೆ ಮಾಡಿದಲ್ಲಿ ಭಕ್ತಿ ಎಂಬುದು ತನಗೆ ಪ್ರಾಪ್ತವಾಗುವದೆಂದು ಬಸವೇಶ್ವರನು ಅನ್ನುತ್ತಾನೆ.

(೧೧) **ಆನು ಭಕ್ತನಲ್ಲಯ್ಯ. ಆನು ವೇಷಧಾರಿಯಯ್ಯ. ಕಾಟುಗ, ಕೆತ್ತುಗ, ಪೊಲ್ಲುಗನೆಂಬುದು ಎನ್ನ ಹೆಸರು. ಕೂಡಲಸಂಗಮದೇವಾ, ನಿಮ್ಮ ಶರಣರ ಮನೆಯ ಮಗ ನಾನಯ್ಯ.**

ಕಾಟುಗ = ಕಟುಕ; ಕೆತ್ತುಗ = ಹಿಂಸಿಸುವ; ಪೊಲ್ಲುಗ = ಅನ್ಯಾಯ ಮಾಡುವವ.

ಭಾವಃ— ನನ್ನಲ್ಲಿ ಭಕ್ತಿ ಎಂಬುದಿಲ್ಲ. ನಾನು ಕೇವಲ ಭಕ್ತನ ವೇಷ ಹಾಕಿಕೊಂಡಿದ್ದೇನೆ. ನನ್ನ ಹೆಸರು ಕಟುಕ, ಹಿಂಸೆ ಮಾಡುವವ, ಅನ್ಯಾಯ ಮಾಡುವವ ಎಂದಿದೆ. ನಾನು ಈ ರೀತಿ ಯಾವಾಗಲೂ ವರ್ತಿಸುತ್ತಿರುವದರಿಂದ ಇದೇ ಹೆಸರು ನನಗೆ ಸಲ್ಲುತ್ತದೆಂದು ಬಸವೇಶ್ವರನು ಅಂದುಕೊಳ್ಳುತ್ತಾನೆ. ಅವನು ಹೀಗೆ ಅನ್ನುತ್ತಿರಲು ಅವನಲ್ಲಿ ಭಕ್ತಿಯ ಉದ್ರೇಕವು ಬಂದು 'ಎಲೋ ಕೂಡಲಸಂಗಮನೇ ನಿನ್ನ ಶರಣರ ಮನೆಯಲ್ಲಿ ನಾನು ಆಳಾಗಿ ಜೀವಿಸುತ್ತೇನೆ.' ಎಂದು ನುಡಿಯುತ್ತಾನೆ.

(೧೨) **ಶಬ್ದ ಸಂಭಾಷಣೆಯ ನುಡಿಯ ವರ್ತಿಸಿ ನುಡಿವೆ. ತೊಡೆಹದ ಕೆಲಸದ ಬಣ್ಣದಂತೆ, ಕಡಿಹಕ್ಕೆ ಒರೆಗೆ ಬಾರದು ನೋಡಾ! ಎನ್ನ ಮನದಲೊಂದು, ಹೃದಯದಲೊಂದು, ವಚನದಲೊಂದು ನೋಡಾ! ಕೂಡಲಸಂಗಮದೇವ ಆನು ಭಕ್ತನೆಂಬ ಹುಸಿಯ ಮಸಕವನೇನ ಬಣ್ಣಿಸುವೆನಯ್ಯ?**

ವರ್ತಿಸು = ತಿರುಗಿಸು; ತೊಡೆಹ = ಲೇಪನ, ಗಿಲೀಟು; ಕಡಿಹ = ಕಡಿಯುವದು; ಮಸಕ = ಅಶುದ್ಧತೆ, ಹೊಲಸುತನ.

ಭಾವಃ— ನಾನು ಮಾತನಾಡುವಾಗ ನುಡಿಗಳಲ್ಲಿ ಸರಳತೆ ಇರುವದಿಲ್ಲ. ಅಂದರೆ ಅವುಗಳಲ್ಲಿ ಕಾಪಟ್ಯವಿರುತ್ತದೆ. ಗಿಲೀಟಾದ ಪದಾರ್ಥವು ಹೊರಗೆ ಅತ್ಯಂತ ಶೋಭಾಯಮಾನವಾಗಿ ಕಾಣುತ್ತದೆ. ಆದರೆ ಅದನ್ನು ಕಡಿದರೆ ಅಥವಾ ಒರೆಗೆ ಹಚ್ಚಿದರೆ, ಅದರೊಳಗೇನೂ ಇರುವದಿಲ್ಲೆಂದು ಕಂಡುಬರುತ್ತದೆ. ಹಾಗೆಯೇ ನಾನಿದ್ದೇನೆ. ನನ್ನ ಮನಸ್ಸಿನಲೊಂದು, ಹೃದಯದಲೊಂದು, ಮಾತಿನಲೊಂದು ಹೀಗೆ ನನ್ನ ವರ್ತನೆ ಇರುತ್ತದೆ. ಎಲೋ ಪರಮಾತ್ಮನೇ, ನಾನು ಭಕ್ತನೆಂದು ಹೇಳಿಕೊಂಡರೂ, ಅದು ಕೇವಲ ಅಶುದ್ಧ ಮಾತು. ಇದನ್ನೇನು ಹೇಳಲಿ ಎಂದು ಬಸವೇಶ್ವರನು ಅಂದುಕೊಳ್ಳುತ್ತಾನೆ.

(೧೩) **ಲೌಕಿಕರ ಕಂಡು, ಆಡುವೆ ಹಾಡುವೆ. ತಾರ್ಕಿಕರ ಕಂಡು, ಆಡುವೆ ಹಾಡುವೆ. ಸಹಜ ಗುಣವೆನ್ನಲಿಲ್ಲಯ್ಯ. ನಿಜಭಕ್ತಿ ಎನಗಿಲ್ಲ. ತಂದೆ ಏಕೋಭಾವ ಎನಗುಳ್ಳರೆ, ಏಕೆ ನೀ ಕರುಣಿಸೆ ಕೂಡಲಸಂಗಮದೇವ?**

ಭಾವಃ— ಜನರು ತಮ್ಮ ವ್ಯವಹಾರಗಳ ಸಲುವಾಗಿ ಯಾವಾಗಲೂ ವಿಚಾರ ಮಾಡುತ್ತಿರುತ್ತಾರೆ, ಪರಸ್ಪರ ಸ್ಪರ್ಧೆ ಮಾಡುತ್ತಾರೆ, ಅನೇಕ ರೀತಿಯಾಗಿ ಹೆಣಗಾಡುತ್ತಾರೆ. ಅವರನ್ನು ನೋಡಿ ನಾನು ಆನಂದಿಸುತ್ತೇನೆ. ಬೇರೆ ಅನೇಕರು ಧರ್ಮದ ವಿಷಯವಾಗಿ ಅನೇಕ ತರ್ಕಗಳನ್ನು ಮಾಡುತ್ತಾರೆ ಮತ್ತು ವಾದವಿವಾದ ಮಾಡುತ್ತಾರೆ. ಅವರನ್ನು ನೋಡಿಯೂ ನಾನು ಆನಂದಪಡುತ್ತೇನೆ. ಇಂಥ ಕಾರ್ಯಗಳೆಲ್ಲ ಮನುಷ್ಯನಿಗೆ ಮನೋರಂಜಕವಾಗಿರುತ್ತವೆ. ಆದರೆ ಹೀಗೆ ವರ್ತಿಸುವದು ಸಹಜ ಭಕ್ತಿಯಲ್ಲ. ಯಾಕಂದರೆ ಇವು ಮನುಷ್ಯನನ್ನು ಅನೇಕ ಕಡೆಗೆ ಎಳೆಯುತ್ತವೆ. ಮತ್ತು ಅವನಲ್ಲಿ ಚಂಚಲತೆಯನ್ನುಂಟು ಮಾಡುತ್ತವೆ. ಭಕ್ತಿಯಲ್ಲಿ ಏಕೋಭಾವವಿರತಕ್ಕದ್ದು. ಇಂಥ ಭಕ್ತಿಯು ನನ್ನಲ್ಲಿದ್ದರೆ ಪರಮಾತ್ಮನು ನನಗೆ ಏಕೆ ಒಲಿಯಲಾರನು? ನಿಜವಾಗಿ ಅವನು ಒಲಿಯುವನೆಂದು ಬಸವೇಶ್ವರನ ಅಭಿಪ್ರಾಯವು.

(೧೪) **ಉಡುವಿನ ಭಾವದಲ್ಲಿ ಹಡೆದರೆಮ್ಮವರು, ಉಸಿರುವಳ್ಳಿಯಂತೆನ್ನ ಇರವು. ಬಾವುಲಬಾಳುವೆಯ ತೆರನಂತೆ. ಹೊತ್ತಾರೆ ಎದ್ದ ಕುರುಡಂಗೆ ಅಗುಸೆಯಲ್ಲಿ ಅಸ್ತಮಯವಾದಂತೆ. ಅನುಭಕ್ತಿಯ ಬಯಸಿದರಹುದೇ ಕೂಡಲಸಂಗಮದೇವ?**

ಭಾವಃ— ಉಡುವಿನ ಗುಣವು ನನ್ನಲ್ಲಿದೆ. ಅದರ ಸ್ವಭಾವವು ಅತ್ಯಂತ ಹಟಮಾರಿತನದ್ದು. ನನ್ನ ಹುಟ್ಟುಗುಣವು ಅದರಂತೆಯೆ ಇದೆ. ಮನುಷ್ಯನ ಪ್ರಗತಿಗೆ ಹಟಮಾರಿತನವು ಬಾಧಕವಾದದ್ದು. ಉಸಿರುವಳ್ಳಿಯ ಗುಣವೂ ನನ್ನಲ್ಲಿದೆ. ಇದು ಬೆಳಿಗ್ಗೆ ಹಚ್ಚಗಿರುತ್ತದೆ, ಮಧ್ಯಾಹ್ನದಲ್ಲಿ ನಸುಗೆಂಪಾಗಿರುತ್ತದೆ, ಸಾಯಂಕಾಲ ಕಪ್ಪಗಿರುತ್ತದೆ. ಅದರಂತೆ ನಾನು ಅತ್ಯಂತ ಚಂಚಲವೃತ್ತಿಯುವನು. ನನ್ನಲ್ಲಿ ನಿಜವಿಲ್ಲದಕ್ಕೋಸ್ಕರ ಈ ಸ್ಥಿತಿಯಾಗುತ್ತದೆ. ತೊಗಲ ಬಾವುಲಿಯು ಕಾಲು ಮೇಲು ಮಾಡಿಕೊಂಡು ಬಾಯಲ್ಲಿ ತಿಂಬುವದನ್ನು, ಮತ್ತು ಬಾಯಲ್ಲೇ ಮಲವಿಸರ್ಜನೆ ಮಾಡುವದನ್ನು ಮಾಡುತ್ತದೆ. ಹಾಗೆಯೇ ನನ್ನ ಸ್ಥಿತಿಯು. ಒಬ್ಬ ಕುರುಡನು ಹೊತ್ತಾರೆ ಎದ್ದು ದಾರಿತಪ್ಪಿ ಆ ಸಂದಿ ಈ ಸಂದಿ ಸುತ್ತುತ್ತ ಕಡೆಗೆ ಹೆಬ್ಬಾಗಿಲಿಗೆ ಬರುವಷ್ಟರಲ್ಲಿ ಸಂಜೆಯಾಗುತ್ತದೆ. ಹಾಗೆಯೇ ನಾನು ಪ್ರಪಂಚಿನೊಡನೆ ಕೂಡಿಕೊಂಡು ಸುತ್ತುತ್ತಾ ಇದ್ದೇನೆ. ಹೀಗೆ ನನ್ನ ವರ್ತನೆ ಇರುವಾಗ್ಗೆ ನನ್ನಲ್ಲಿ ಭಕ್ತಿ ಇರಬೇಕೆಂದು ಬಯಸಿದರೆ ಅದು ಹೇಗೆ ಉಂಟಾದೀತು? ಉಂಟಾಗಲಾರದೆಂದು ಬಸವೇಶ್ವರನ ಅಭಿಪ್ರಾಯವು.

ಶುದ್ಧಮನಸ್ಸುಳ್ಳವನಾಗಿರು.

(೧೫) ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಿಲ್ಲದನ್ನಕ್ಕ? ಮಣಿಯು ಕಟ್ಟಿ ಏವೆನಯ್ಯಾ, ಮನಮುಟ್ಟದನ್ನಕ? ನೂರನೋದಿ ಏವೆನಯ್ಯಾ ನಮ್ಮ ಕೂಡಲಸಂಗಮದೇವರ ಮನಮುಟ್ಟದನ್ನಕ್ಕ?

ಹೂಸು = ಲೇಪನ ಮಾಡು, ಹಚ್ಚಿಕೊಳ್ಳು; ಏವೆನಯ್ಯ = ಏನು ಮಾಡಲಿ.

ಭಾವಃ— ಅನೇಕರು ಜನರಲ್ಲಿ ತಮ್ಮ ಭಕ್ತಿಯನ್ನು ತೋರಿಸುವದಕ್ಕೋಸ್ಕರ ಢಾಳವಾಗಿ ವಿಭೂತಿಯನ್ನು ಹಚ್ಚಿಕೊಳ್ಳುತ್ತಾರೆ. ಆದರೆ ಅವರ ಮನಸ್ಸು ಶುದ್ಧವಿರುವದಿಲ್ಲ. ಅಂದಬಳಿಕ ವಿಭೂತಿಯನ್ನು ಹಚ್ಚುವದರಿಂದೇನು ಪ್ರಯೋಜನ? ಹಾಗೆಯೇ ರುದ್ರಾಕ್ಷಿ ಮಣಿಗಳನ್ನು ಕಟ್ಟಿಕೊಂಡು ಜಪಮಾಡುವದುಂಟು. ಆದರೆ ಅವರ ಜಪಗಳು ಅವರ ಮನಸ್ಸನ್ನು ಮುಟ್ಟುವದಿಲ್ಲ. ಅಂದಬಳಿಕ ಹೀಗೆ ಜಪಮಾಡುವದರಿಂದ

ಏನು ಪ್ರಯೋಜನ? ಹಾಗೆಯೇ ಹಲವರು ಅನೇಕ ಗ್ರಂಥಗಳನ್ನು ಓದಿ ತಮ್ಮ ವಿದ್ವತ್ತೆಯನ್ನು ತೋರಿಸುವದುಂಟು. ಆದರೆ ಅವರ ಮನಸ್ಸು ಶುದ್ಧವಾಗಿರುವದಿಲ್ಲ. ಅಂದಬಳಿಕ ಅವರ ವಿದ್ವತ್ತೆಯಿಂದ ಏನು ಪ್ರಯೋಜನ? ಇವಾವೂ ಭಕ್ತಿಯಲ್ಲವೆಂದು ಬಸವೇಶ್ವರನ ಅಭಿಪ್ರಾಯವು.

(೧೬) ತನುಶುಚಿ ಇಲ್ಲದವನ ದೇಹಾರವೇಕೆ? ದೇವರು ಕೊಡ ನೆಂಬ ಭ್ರಾಂತದೇಕೆ? ಮನಕ್ಕೆ ಮನವೇ ಸಾಕ್ಷಿ ಸಾಲದೇ ಲಿಂಗತಂದೆ? ಹೇಗೆ ಮನ ಹಾಗೆ ಘನ ತಪ್ಪದು ಕೂಡಲಸಂಗಮದೇವಾ.

ದೇಹಾರ = ಪೂಜಾದಿ ಕ್ರಿಯೆಗಳು.

ಭಾವಃ— ಜನರು ತಮ್ಮಲ್ಲಿ ಭಕ್ತಿ ಇದೆ ಎಂಬುದನ್ನು ತೋರಿಸುವದಕ್ಕೋಸ್ಕರ ಅವರು ಪೂಜಾದಿ ಕ್ರಿಯೆಗಳನ್ನು ಹೆಚ್ಚಾಗಿ ಮಾಡುವದುಂಟು. ಆದರೆ ಈ ಆಡಂಬರವೇಕೆ? ದೇವರ ವಿಷಯವಾಗಿ ಅವಿಶ್ವಾಸವು ಅವರಲ್ಲಿರುವದರಿಂದ ಅವರು ಹೀಗೆ ಮಾಡುತ್ತಾರೆಂದು ಬಸವೇಶ್ವರನ ಅಭಿಪ್ರಾಯವು. ಆದ್ದರಿಂದ ಪೂಜಾದಿ ಕ್ರಿಯೆಗಳನ್ನು ಜನರಿಗೆ ತೋರಿಸುವದಕ್ಕೋಸ್ಕರ ಮಾಡಬಾರದು. ನಿಮ್ಮಲ್ಲಿ ಭಕ್ತಿ ಎಂಬುದಿದೆಯೋ ಹೇಗೆ ಎಂಬುದಕ್ಕೆ ಜನರ ಸಾಕ್ಷಿಗಿಂತಲೂ ನಿಮ್ಮ ಮನವೇ ಯೋಗ್ಯ ಸಾಕ್ಷಿಯು. ಶುದ್ಧ ಮನಸ್ಸು ಯಾವ ಪ್ರಮಾಣದಿಂದಿರುತ್ತದೆಯೋ, ಅದೇ ಪ್ರಮಾಣದಿಂದ ನೀವು ಘನತರ ಸ್ಥಿತಿಯನ್ನು ಹೊಂದುವಿರಿ.

(೧೭) ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತಯಿಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತಯಿಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವರ ಮೆಚ್ಚ ಕೂಡಲಸಂಗಮದೇವ.

ಸಂತಯಿಸು = ಸಮಾಧಾನ ಮಾಡು, ಶಾಂತಮಾಡು.

ಭಾವಃ— ಜನರು ತಮ್ಮ ಸುಧಾರಣೆಯನ್ನು ಮೊದಲು ಮಾಡಿಕೊಳ್ಳಬೇಕು. ಹೀಗಿಲ್ಲದಿದ್ದರೆ ಅವರು ಇತರರ ಸುಧಾರಣೆಯನ್ನು ಮಾಡಲಾರರು. ಮಾಡಲು ತೊಡಗಿದರೆ ಅದು ವ್ಯರ್ಥವಾಗುವದೆಂದು ಬಸವೇಶ್ವರನ ಅಭಿಪ್ರಾಯವು.

(೧೮) ಚೇಳಿಂಗೆ ಬಸುರಾಯಿತ್ತೇ ಕಡೆ. ಬಾಳೆಗೆ ಫಲವಾಯಿತ್ತೇ ಕಡೆ ನೋಡಾ. ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೇ

ಕಡೆ. ಮಾಡುವ ಭಕ್ತಂಗೆ ಮನಹೀನವಾದರೆ ಅದೇ ಕಡೆ ಕೂಡಲ ಸಂಗಮದೇವಾ.

ಓಸರಿಸು = ಹಿಂದಕ್ಕೆ ಸರಿ.

ಭಾವಃ— ಯಾವನಾದರೊಬ್ಬನು ಭಕ್ತಿಯನ್ನು ಮಾಡುವಲ್ಲಿ ಮನಸ್ಸು ಹೀನವಾದರೆ ಅದು ಅವನಿಗೆ ಮರಣವೆಂದು ಬಸವೇಶ್ವರನು ಇಲ್ಲಿ ಹೇಳುತಾನೆ. ಇದರಲ್ಲಿ ಅವನು ಚೇಳು ಮತ್ತು ಬಾಳೆಗಿಡ ಇವುಗಳ ಉದಾಹರಣೆಯನ್ನು ಕೊಟ್ಟಿದ್ದಾನೆ.

(೧೯) ಕರಿ ಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ. ಗಿರಿ ಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ. ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ. ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ? ಬಾರದಯ್ಯಾ ಕೂಡಲಸಂಗಮದೇವಾ.

ಕರಿ = ಆನೆ; ತಮಂಧ = ಕುರುಡನನ್ನಾಗಿ ಮಾಡುವಷ್ಟು ಕತ್ತಲೆ, ಗಾಢಾಂಧಕಾರ; ಮರಹು = ಅಜ್ಞಾನ.

ಭಾವಃ— ಬಸವೇಶ್ವರನು ಮನಸ್ಸಿನ ಮಹತ್ವವನ್ನು ಇಲ್ಲಿ ಹೇಳುತ್ತಾನೆ. ಅದು ಶುದ್ಧವಾದಲ್ಲಿ ಅದರಲ್ಲಿ ಒಂದು ಮಹತ್ತರವಾದ ಶಕ್ತಿಯು ಬರುತ್ತದೆಂದು ಅವನ ಭಾವವು. ಇದರಲ್ಲಿ ಅವನು ಆನೆ—ಅಂಕುಶ, ಪರ್ವತ—ವಜ್ರ, ಕತ್ತಲೆ—ದೀಪದ ಬೆಳಕು ಇವುಗಳ ಉದಾಹರಣೆಯನ್ನು ಕೊಟ್ಟಿದ್ದಾನೆ. ಅಂಕುಶ, ವಜ್ರ, ದೀಪದ ಬೆಳಕು ಇವು ಕಣ್ಣಿಗೆ ಸಣ್ಣವಾಗಿ ಕಂಡರೂ ಅವುಗಳಲ್ಲಿ ಹ್ಯಾಗೆ ಶಕ್ತಿ ಇದೆಯೋ ಹಾಗೆ ಮನಸ್ಸಿನಲ್ಲಿ ಶಕ್ತಿ ಇದೆ.

(೨೦) ಕೋಟಾನು ಕೋಟಿ ಜಪವ ಮಾಡಿ ಕೋಟಲೆಗೊಳಲದೇಕೆ ಮನವೇ? ಕಿಂಚಿತ್ತು ಗೀತ ಒಂದನಂತಕೋಟಿ ಜಪ. ಜಪವೆಂಬುದೇಕೆ ಮನವೇ? ಕೂಡಲಸಂಗನ ಶರಣರ ಕಂಡು ಆಡಿ ಹಾಡಿ ಬದುಕು ಮನವೇ?

ಕೋಟಲೆಗೊಳು = ಶ್ರಮಪಡು; ಗೀತ = ಹಾಡು.

ಭಾವಃ— ಕೋಟ್ಯಾನುಕೋಟಿ ಜಪಗಳನ್ನು ಮಾಡುತ್ತ ಶ್ರಮಪಡಬೇಡ. ಭಕ್ತಿಪೂರ್ವಕವಾಗಿ ನುಡಿದ ಒಂದೇ ಒಂದು ಹಾಡು ಅನಂತ ಕೋಟಿ ಜಪಗಳಿಗೆ ಸಮಾನವು. ಜಪವೆಂಬುದು ಯಾಕೆ? ಶರಣರನ್ನು ಕಂಡು, ಆಡಿ ಹಾಡಿ ಬದುಕು ಎಂದು ಬಸವೇಶ್ವರನು ತನ್ನ ಮನಸ್ಸಿಗೆ ಹೇಳಿಕೊಳ್ಳುತ್ತಾನೆ.

(೨೧) ಸುರರ ಬೇಡಿದರಿಲ್ಲ. ನರರ ಬೇಡಿದರಿಲ್ಲ. ಬರಿದೆ ಧೃತಿಗೆಡಬೇಡ ಮನವೇ. ಆರನಾದಡೆಯೂ ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೇ. ಕೂಡಲಸಂಗಮದೇವನಲ್ಲದೆ ಆರ ಬೇಡಿದರಿಲ್ಲ ಮನವೇ.

ಧೃತಿಗೆಡು = ಧೈರ್ಯಗೆಡು; ಬರಿದೆ = ವ್ಯರ್ಥವಾಗಿ.

ಭಾವಃ— ದೇವತೆಗಳನ್ನು ಬೇಡಿದಲ್ಲಿ ಉಪಯೋಗವಾಗಲಾರದು. ಜನರನ್ನು ಬೇಡಿದಲ್ಲಿ ಅವರಿಂದಲೂ ಉಪಯೋಗವಾಗಲಾರದು. ಆದ್ದರಿಂದ ಧೈರ್ಯಗೆಟ್ಟು ಸಿಕ್ಕಸಿಕ್ಕವರನ್ನು ಬೇಡದಿರು. ಪರಮಾತ್ಮನನ್ನು ಬಿಟ್ಟು ಬೇರೆ ಯಾರನ್ನೂ ಬೇಡಲಿಕ್ಕೆ ಹೋಗಬೇಡ ಎಂದು ಬಸವೇಶ್ವರನು ತನ್ನ ಮನಸ್ಸಿಗೆ ಹೇಳಿಕೊಳ್ಳುತ್ತಾನೆ.

(೨೨) ಮರನನೇರಿದ ಮರ್ಕಟನಂತೆ ಹಲವು ಕೊಂಬಿಂಗೆ ಹಾರುತಲಿದ್ದೇನೆ. ಬೆಂದ ಮನವ ನಾನೆಂತು ನಂಬುವೆನಯ್ಯಾ! ಎಂತು ನೆಚ್ಚುವೆನಯ್ಯಾ! ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ.

ಮರ್ಕಟ = ಮಂಗ; ಹೋಗಲೀಯದು = ಹೋಗಗೊಡದು.

ಭಾವಃ— ಮರವನ್ನೇರಿದ ಮಂಗನಂತೆ ಕೊಂಬೆ ಕೊಂಬೆಗೆ ಹಾರುತ್ತಲಿದ್ದೇನೆ. ಕೆಟ್ಟು ಹೋದ ಈ ಮನಸ್ಸನ್ನು ಹೇಗೆ ನಂಬಲಿ? ಹೇಗೆ ಅದನ್ನು ನೆಚ್ಚಲಿ? ಅದು ಪರಮಾತ್ಮನ ಕಡೆಗೆ ನನ್ನನ್ನು ಹೋಗಗೊಡದು.

(೨೩) ಆಡಿ ಅಳುಪದಿರಾ. ಲೇಸ ಮಾಡಿ ಮರುಗದಿರಾ. ಎಲೆ ಮನವೇ ಕೂಡಿ ತಪ್ಪದಿರಾ. ಬೇಡಿದವರಿಗೆ ಇಲ್ಲೆನ್ನದಿರಾ ಕಂಡಾ! ನಾಡ ಮಾತ ಬೇಡ. ಸೆರೆಗೊಡ್ಡಿ ಬೇಡು ಕೂಡಲಸಂಗನ ಶರಣರ.

ಆಡಿ = ಮಾತಾಡಿ; ಅಳುಪು = ಆಶೆಮಾಡು.

ಭಾವಃ— ಮಾತಾಡುವಲ್ಲಿ ಏನಾದರೊಂದನ್ನು ಎರಡನೆಯವರಿಂದ ದೊರಕಿಸಲು ಆಶೆಮಾಡಿ ನುಡಿಯಬೇಡ. ಯೋಗ್ಯವಾದುದನ್ನು ಮಾಡಿ

ಆನಂದಿಸಬೇಕು. ಅದರಲ್ಲಿ ಕಷ್ಟವಾಯಿತೆಂದು ಮರುಗಬೇಡ. ಜನರಲ್ಲಿದ್ದ ಬಳಿಕ, ಅವರೊಡನೆ ಸರಿಯಾಗಿ ನಡೆಯಬೇಕು, ತಪ್ಪಬಾರದು. ಬೇಡಿದವರಿಗೆ ದಾನ ಧರ್ಮಮಾಡಬೇಕು. ಬಿರಿಸು ಮಾತುಗಳನ್ನಾಡಬಾರದು. ಶಿವಶರಣರನ್ನು ದೈನ್ಯದಿಂದ ಪ್ರಾರ್ಥಿಸುತ್ತಿರಬೇಕು.

(೨೪) ತನ್ನಿಚ್ಛೆಯ ನುಡಿದರೆ ಮೆಚ್ಚುವುದೀ ಮನವು. ಇದಿರಿಚ್ಛೆಯ ನುಡಿದರೆ, ಮೆಚ್ಚದೀ ಮನವು. ಕೂಡಲಸಂಗನ ಶರಣರ ನಚ್ಚದ ಮೆಚ್ಚದ ಮನವ ಕಿಚ್ಚಿನೊಳಗಿಕ್ಕು.

ಇದಿರಿಚ್ಛೆ = ವಿರುದ್ಧ ಇಚ್ಛೆ.

ಭಾವಃ— ತನ್ನಂತೆ ನುಡಿದರೆ ಮನಸ್ಸು ಮೆಚ್ಚುತ್ತಿದೆ. ವಿರುದ್ಧ ನುಡಿದರೆ ಅದು ಮೆಚ್ಚುವದಿಲ್ಲ. ಅದು ಶರಣರನ್ನು ನಂಬುವದಿಲ್ಲ. ಅವರನ್ನು ನೋಡಿ ಆನಂದಿಸುವದಿಲ್ಲ. ಇಂಥ ಮನಸ್ಸನ್ನು ಕಿಚ್ಚಿನೊಳಗೆ ಹಾಕಿ ಬೇಯಿಸೆಂದು ಬಸವೇಶ್ವರನು ಸಿಟ್ಟಿನಿಂದ ಅನ್ನುತ್ತಾನೆ.

(೨೫) ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯ? ಕೈಮುಟ್ಟಿ ಪೂಜಿಸುವೊಡೆ, ಎನ್ನ ಕೈ ಶುದ್ಧವಲ್ಲಯ್ಯ! ಮನಮುಟ್ಟಿ ಪೂಜಿಸುವೊಡೆ, ಎನ್ನ ಮನ ಶುದ್ಧವಲ್ಲಯ್ಯ! ಭಾವ ಶುದ್ಧವಾದರೆ, ಕೂಡಲಸಂಗಯ್ಯನಿತ್ತ ಬಾ ಎಂದು ಎತ್ತಿಕೊಳ್ಳನೇಕಯ್ಯ?

ಕೆಲ = ಮಗ್ಗಲು, ಪಕ್ಕ; ಪೂಜಿಸುವೊಡೆ = ಪೂಜಿಸಿದಲ್ಲಿ.

ಭಾವಃ— ನಾನು ಸ್ನಾನಮಾಡಿ ಹೊರಗಿನ ಶರೀರವನ್ನು ಮಾತ್ರ ಸ್ವಚ್ಛಮಾಡಿಕೊಳ್ಳುತ್ತೇನೆ. ಆದರೆ ನನ್ನ ಮನಸ್ಸು ಶುದ್ಧವಲ್ಲ. ಪರಮಾತ್ಮನನ್ನು ಕೈಮುಟ್ಟಿ ಪೂಜಿಸಬೇಕೆಂದರೆ, ಆ ನನ್ನ ಕೈ ಶುದ್ಧವಲ್ಲ. ಮನ ಮುಟ್ಟಿ ಪೂಜಿಸಬೇಕೆಂದರೆ ಮನಸ್ಸೂ ಶುದ್ಧವಲ್ಲ. ಆದರೆ ನನ್ನ ಭಾವವು ಶುದ್ಧವಾದರೆ ಪರಮಾತ್ಮನು ನನ್ನನ್ನು ತನ್ನ ಹತ್ತಿರಕ್ಕೆ ಕರೆದೊಯ್ಯುವನು.

(೨೬) ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ, ಎಂದೆಂದು ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ! ನಿನ್ನ ಮನದಲ್ಲಿ ಮಾಯಾ ಮಂಜರ ಕೊಲುವರೆ ನಿನ್ನ ಹಂಜರ ಕಾಯ್ವುದೇ ಕೂಡಲಸಂಗಮದೇವನಲ್ಲದೆ?

ಹಂಜರ = ಪಂಜರ; ಬಲ್ಲಿತ್ತು = ಗಟ್ಟಿಯಾದುದು; ಗುಡಿಗಟ್ಟು = ನಿಶಾನಿಯನ್ನೇರಿಸು; ಮಂಜರ = ಬೆಕ್ಕು; ಕಾಯ್ವುದೇ = ಕಾಯುವದೇ.

ಭಾವಃ— ಪಂಜರವು ಸುರಕ್ಷಿತವಾದದ್ದೆಂದು ತಿಳಿದು ಅದರಲ್ಲಿದ್ದುಕೊಂಡು ಗಿಳಿಯು ಹಾಡುತ್ತದೆ. ನಾನು ಎಂದೆಂದಿಗೂ ಅಳಿಯೆನೆಂದು ಅದು ಆಗ ಭಾವಿಸಿಕೊಂಡಿರುತ್ತದೆ. ಹಾಗೆಯೇ ಮನುಷ್ಯನು ತಾನು ಯಾವಾಗಲೂ ಸುರಕ್ಷಿತವಾಗಿದ್ದೇನೆಂದು ತಿಳಿದುಕೊಂಡಿರುತ್ತಾನೆ. ಆದರೆ ಮಾಯೆ ಎಂಬ ಬೆಕ್ಕು ಬಂದು ಅವನನ್ನು ಹಿಡಿದರೆ, ಆಗ ಅವನನ್ನು ಕಾಯುವವನು ಪರಮಾತ್ಮನಲ್ಲದೆ ಬೇರೆ ಯಾರು?

(೨೭) ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆನ್ನ ಮನ. ಎಂತಯ್ಯಾ? ಎನಗಿನ್ನಾವುದು ಗತಿ? ಎಂತಯ್ಯ? ಎನಗಿನ್ನಾವುದು ಮತಿ? ಎಂತಯ್ಯ? ಹರಹರ ಕೂಡಲಸಂಗಮದೇವ ಮನವ ಸಂತೈಸನ್ನ.

ಸುಚಿತ್ತ = ಶುದ್ಧಭಾವ; ಸಂತೈಸು = ಸಮಾಧಾನ ಮಾಡು.

ಭಾವಃ— ಶುದ್ಧವಾದ ಚಿತ್ತದಿಂದ ನನ್ನ ಮನಸ್ಸು ಪರಮಾತ್ಮನನ್ನು ನೆನೆಯುವದಿಲ್ಲ. ಆದ್ದರಿಂದ ನನಗೆ ಇನ್ನಾವುದು ಗತಿಯು, ಇನ್ನಾವುದು ದಾರಿಯು, ಎಂದು ಬಸವೇಶ್ವರನು ದುಃಖಪಡುತ್ತ, ಕಡೆಗೆ ಪರಮಾತ್ಮನೇ ನನಗೆ ಗತಿಯು ಎಂದು ಭಾವಿಸಿ ಅವನನ್ನು ಧ್ಯಾನಿಸುತ್ತಾನೆ. ಮತ್ತು 'ನೀನೇ ನನಗೆ ಸಮಾಧಾನ ಹೇಳು' ಎಂದು ಅವನನ್ನು ಬೇಡಿಕೊಳ್ಳುತ್ತಾನೆ.

(೨೮) ತನ್ನ ವಿಚಾರಿಸಲೊಲ್ಲದು. ಇದಿರ ವಿಚಾರಿಸ ಹೋಹುದೀ ಮನವು. ಏನ ಮಾಡುವೆನೀ ಮನವನು? ಎಂತು ಮಾಡುವೆನೀ ಮನವನು, ಕೂಡಲಸಂಗನ ಶರಣರ ನಚ್ಚದ ಮೆಚ್ಚದ ಮನವನು?

ಹೋಹುದು - ಹೋಗುವದು; ಎಂತು = ಹೇಗೆ.

ಭಾವಃ— ನನ್ನ ಮನಸ್ಸು ತಾನು ಹೇಗಿದ್ದೇನೆಂಬುದನ್ನು ವಿಚಾರಿಸಲೊಲ್ಲದೆ ಇತರರು ಹೇಗೆ ಇದ್ದಾರೆಂಬುದನ್ನು ವಿಚಾರಿಸಲು ಮುಂದುವರಿಯುತ್ತದೆ. ಅದು ಶರಣರನ್ನು ನೆಚ್ಚುವದಿಲ್ಲ, ಮೆಚ್ಚುವದಿಲ್ಲ. ಇಂಥ ಮನವನ್ನು ನಾನೇನು ಮಾಡಲಿ ಎಂದು ಬಸವೇಶ್ವರನು ಕ್ರೋಧಾವೇಶದಿಂದ ಇಲ್ಲಿ ನುಡಿಯುತ್ತಾನೆ.

(೩೯) ಕುದರನೇಸು ತೊಳೆದರೆಯು ಕೆಸರು ಮಾಬುದೇ ? ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು ಕೃಪೆಯ ಮಾಡಯ್ಯ! ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣರೇ ಎನ್ನ ಮನ. ಕೂಡಲ ಸಂಗಮದೇವ ನಿಮಗೆ ಶರಣೆಂದು ಶುದ್ಧನಯ್ಯಾ.

ಕುದರ = ಮಣ್ಣಿನ ಗೋಡೆ; ಮಾಬುದೇ = ಬಿಡುವುದೇ; ಅವಗುಣ = ದುರ್ಗುಣ.

ಭಾವಃ— ಮಣ್ಣಿನ ಗೋಡೆಯನ್ನು ಎಷ್ಟು ತೊಳೆದರೂ ಅದರ ಕೆಸರು ಹೋಗಲಾರದು. ಆದ್ದರಿಂದ ನನ್ನಲ್ಲಿರುವ ಕೆಟ್ಟ ಗುಣಗಳನ್ನು ಕೃಪೆ ಮಾಡಿ ನೀನೇ ದೂರ ಮಾಡೆಂದು ಬಸವೇಶ್ವರನು ಪರಮಾತ್ಮನನ್ನು ಬೇಡಿಕೊಳ್ಳುತ್ತಾನೆ. ಕಂಬಳಿಯಲ್ಲಿ ಕಣಕವನ್ನು ನಾದಿದರೆ, ಕೆಳಗಿನಿಂದ ಅದರಲ್ಲಿ ಹೊಲಸು ಮೇಲೇರಿ ಬರುವದು ತಪ್ಪಲಾರದು. ಹಾಗೆಯೇ ನನ್ನ ಮನಸ್ಸು. ಅದನ್ನು ಶುದ್ಧ ಮಾಡ ಹೋದರೆ ಅದು ಶುದ್ಧವಾಗುವದಿಲ್ಲ. ಆದರೆ ಪರಮಾತ್ಮನಿಗೆ ನಾನು ಶರಣುಹೋದರೆ ಮಾತ್ರ ಅದು ಶುದ್ಧವಾಗುವದು.

(೪೦) ಕೊಂಬೆಯ ಮೇಲಣ ಮರ್ಕಟನಂತೆ, ಲಂಘಿಸುವುದೆನ್ನ ಮನವು. ನಿಂದಲ್ಲಿ ನಿಲ್ಲಲೀಯದೆನ್ನ ಮನವು. ಹೊಂದಿದಲ್ಲಿ ಹೊಂದಲೀಯದೆನ್ನ ಮನವು. ಕೂಡಲಸಂಗಮದೇವಾ ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು. ನಿಮ್ಮ ಧರ್ಮ.

ಲಂಘಿಸು = ಹಾರು; ನಿಲ್ಲಲೀಯದು = ನಿಲ್ಲಗೊಡದು; ಹೊಂದಲೀಯದು = ಹೊಂದಗೊಡದು; ಭ್ರಮರ = ಗುಂಗೀಹುಳ.

ಭಾವಃ— ಗಿಡದ ಟೊಂಗೆಯ ಮೇಲಿದ್ದ ಮಂಗನಂತೆ ನನ್ನ ಮನಸ್ಸು ಯಾವಾಗಲೂ ಅತ್ತಿತ್ತ ಹಾರಾಡುತ್ತದೆ. ನಾನು ನಿಂತಲ್ಲಿ ಅದು ನನ್ನನ್ನು ನಿಲ್ಲಗೊಡುವದಿಲ್ಲ. ನಾನು ಇದ್ದಲ್ಲಿ ಅದು ಇರಗೊಡುವದಿಲ್ಲ. ಆದ್ದರಿಂದ ಎಲೋ ದೇವನೇ, ನಿನ್ನ ಚರಣಕಮಲದಲ್ಲಿ ನಾನು ಭ್ರಮರನಾಗಿರುವಂತೆ ನನ್ನನ್ನು ಇರಿಸು, ಎಂದು ಬಸವೇಶ್ವರನು ಬೇಡಿಕೊಳ್ಳುತ್ತಾನೆ.

(೪೧) ಭವಭವದಲ್ಲಿ ಎನ್ನ ಮನವು ನೀವಲ್ಲದೆ, ಭವಭವದಲೆನ್ನ ಮನವು ಸಿಲುಕದೆ, ಭವರಾಟಣದೊಳು ತುಂಬದೆ ಕೆಡಹದೆ, ಭವ

ರೋಗ ವೈದ್ಯ ನೀನು. ಭವರಹಿತ ನೀನು, ಅವಧಾರು ಕರುಣಿಸುವುದು ಕೂಡಲಸಂಗಮದೇವ.

ಭವ = ಪ್ರಪಂಚ; ರಾಟಣ = ಚಕ್ರ, ಗಾಲಿ; ಅವಧಾರು = ಲಕ್ಷಿಸು.

ಭಾವಃ— ಬಸವೇಶ್ವರನು ಪರಮಾತ್ಮನನ್ನು ಕುರಿತು ಇಲ್ಲಿ ಪ್ರಾರ್ಥಿಸುತ್ತಾನೆ. ಪರಮಾತ್ಮನೇ ನಾನು ಅನೇಕ ಜನ್ಮಗಳಲ್ಲಿ ಸುತ್ತುತ್ತ ಬಂದರೂ, ನನ್ನ ಮನಸ್ಸು ನಿನ್ನಲ್ಲಿ ಇರಬೇಕೇ ಹೊರ್ತು, ಅದು ಆ ಜನ್ಮಗಳಲ್ಲಾಗುವ ತೊಂದರೆಗಳಲ್ಲಿ ಸಿಲ್ಕದಂತೆ ಮಾಡು. ಪ್ರಪಂಚವೆಂಬ ಚಕ್ರದಲ್ಲಿ ಅದನ್ನು ಹಾಕಬೇಡ. ಹೀಗೆ ಬಸವೇಶ್ವರನು ಬೇಡಿಕೊಳ್ಳುತ್ತಾ, ಎಲೋ ಪರಮಾತ್ಮನೇ ನೀನು ಈ ಪ್ರಪಂಚವೆಂಬ ರೋಗಕ್ಕೆ ವೈದ್ಯನಾಗಿರುವಿ, ನೀನು ಪ್ರಪಂಚವಿಲ್ಲದವನು. ದಯಮಾಡಿ ಲಕ್ಷಿಸು. ನಿನ್ನ ಕರುಣೆಯೊಂದು ನನ್ನ ಮೇಲಿರಲಿ ಎಂದು ಅವನನ್ನು ಬೇಡಿಕೊಳ್ಳುತ್ತಾನೆ.

(೪೨) ಅಂದಣವನೇರಿದ ಸೊಣಗನಂತೆ, ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು. ಸುಡುಸುಡು. ಮನವಿದು ವಿಷಯಕ್ಕೆ ಹರಿವುದು. ಮೃಡ, ನಿಮ್ಮನನುದಿನ ನೆನೆಯಲೀಯದು. ಎನ್ನೊಡೆಯ ಕೂಡಲಸಂಗಮದೇವ, ನಿಮ್ಮ ಚರಣವ ನೆನೆವಂತೆ ಕರುಣಿಸು. ಸೆರಿಗೊಡ್ಡಿಬೇಡುವೆ. ನಿಮ್ಮ ಧರ್ಮ.

ಅಂದಣ = ಪಲ್ಲಕ್ಕಿ; ಸೊಣಗ = ನಾಯಿ; ಮುನ್ನಿನ = ಮೊದಲಿನ; ಮೃಡ = ಶಿವ; ಅನುದಿನ = ದಿನಾಲು, ಪ್ರತಿದಿನ; ನೆನೆಯಲೀಯದು = ನೆನೆಯಗೊಡದು.

ಭಾವಃ— ಪಲ್ಲಕ್ಕಿಯನ್ನೇರಿ ಹೋಗುತ್ತಿದ್ದ ನಾಯಿಯು ದಾರಿಯಲ್ಲಿ ಹೊಲಸನ್ನು ಕಂಡ ಕೂಡಲೆ ಅದು ಪಲ್ಲಕ್ಕಿಯಿಂದ ಜಿಗಿದು ಅದರತ್ತ ಓಡಿಹೋಗುತ್ತದೆ. ಹಾಗೆಯೇ ನನ್ನ ಮನಸ್ಸು ವಿಷಯಗಳ ಕಡೆಗೆ ಹರಿಯುತ್ತ ಹೋಗುತ್ತದೆ. ಎಲೋ ದೇವನೇ ಅದು ನಿನ್ನ ಸ್ಮರಣೆಯನ್ನು ಮಾಡಗೊಡುವದಿಲ್ಲ. ನನ್ನ ಒಡೆಯನಾದ ಪರಮಾತ್ಮನೇ ನಾನು ನಿನ್ನ ಚರಣವನ್ನು ನೆನೆಯುವಂತೆ ಕರುಣಿಸು. ನಿನ್ನನ್ನು ನಾನು ಸೆರಿಗೊಡ್ಡಿ ಬೇಡಿಕೊಳ್ಳುತ್ತೇನೆಂದು ಬಸವೇಶ್ವರನು ಪ್ರಾರ್ಥಿಸುತ್ತಾನೆ.

ಪರಮಾತ್ಮನ ಧ್ಯಾನ.

(೪೪) ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಅಂಬುಜಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ. ಎನಗೆ ನಮ್ಮ ಕೂಡಲಸಂಗಮದೇವನ ನೆನೆವ ಚಿಂತೆ.

ಚಕೋರ = ಚಕ್ರವಾಕ ಪಕ್ಷಿ; ಅಂಬುಜ = ಕಮಲ; ಭಾನು = ಸೂರ್ಯ; ಭ್ರಮರ = ಗುಂಗೀಹುಳ; ಪರಮಳ = ಹೂವು; ಬಂಡು = ಪರಾಗ, ಹೂವಿನಲ್ಲಿಯ ಹುಡಿ.

ಭಾವಃ— ಚಕ್ರವಾಕ ಪಕ್ಷಿಯು ತನ್ನ ಪ್ರಿಯಳೊಂದಿಗೆ ಕೂಡಲಿಕ್ಕೆ ಚಂದ್ರಮನು ಯಾವಾಗ ಉದಯವಾಗುವನೋ ಎಂಬುದನ್ನು ಅತ್ಯಂತ ಅಭಿಲಾಷೆಯಿಂದ ನಿರೀಕ್ಷಿಸುತ್ತ ಹಗಲಿನಲ್ಲಿ ಕಾದಿರುತ್ತದೆ. ಕಮಲವು ರಾತ್ರಿಯ ಕಾಲದಲ್ಲಿ ಮುಚ್ಚಿಕೊಂಡಿದ್ದಾಗ ಸೂರ್ಯೋದಯ ಯಾವಾಗ ಆಗುವದೋ ಎಂಬುದನ್ನೇ ನಿರೀಕ್ಷಿಸುತ್ತ ಅರಳಲು ಹಾತೊರೆಯುತ್ತದೆ. ಭ್ರಮರವು ಹೂವಿನ ಸುಗಂಧಮಯವಾದ ಬಂಡನ್ನು ಯಾವಾಗ ತಿನ್ನುವೆನೋ ಎಂದು ಅಭಿಲಾಷೆಪಡುತ್ತಿರುತ್ತದೆ. ಇವೆಲ್ಲವು ಎಷ್ಟು ಆತುರತೆಯಿಂದ ಕಾಯುತ್ತಿರುತ್ತವೆಯೋ, ಅಷ್ಟೇ ಆತುರತೆಯಿಂದ ನಾನು ಪರಮಾತ್ಮನನ್ನು ನೆನೆಯಲು ಆತುರಪಡುತ್ತ ಇದ್ದೇನೆ. ಪರಮಾತ್ಮನಲ್ಲಿ ಭಕ್ತಿಯು ಆತುರತೆಯು ತುಂಬಿದಾಗ ಮನುಷ್ಯನ ಮನಸ್ಸು ಹೇಗಿರಬೇಕೆಂಬುದನ್ನು ಬಸವೇಶ್ವರನು ಇಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟು ಹೇಳಿದ್ದಾನೆ.

(೪೫) ಎನಗೆ ನಿಮ್ಮ ನೆನಹಾದಾಗವೇ ಉದಯ. ಎನಗೆ ನಿಮ್ಮ ಮರಹಾದಾಗವೇ ಅಸ್ತಮಾನ. ಎನಗೆ ನಿಮ್ಮ ನೆನಹವೇ ಪ್ರಾಣ, ಕಾಣಾ ತಂದೆ ಸ್ವಾಮಿ. ಎನ್ನ ಹೃದಯದಲ್ಲಿ ನಿಮ್ಮ ಚರಣಮುಂಡಿಗೆಯನೊತ್ತಯ್ಯಾ! ವದನದಲ್ಲಿ ಷಡಕ್ಷರಿಯ ಬರೆಯಯ್ಯಾ ಕೂಡಲಸಂಗಮದೇವ.

ನೆನಹು = ಧ್ಯಾನ; ಮರಹು = ಮರವೆ; ಉಂಡಿಗೆ = ಮುದ್ರೆ.

ಭಾವಃ— ಪರಮಾತ್ಮನೇ, ನನಗೆ ನಿಮ್ಮ ಸ್ಮರಣೆಯು ಆದಾಗಲೇ ಸೂರ್ಯೋದಯವಾಯಿತೆಂದು ಮತ್ತು ನಿಮ್ಮನ್ನು ಮರೆದಾಗಲೇ ಸೂರ್ಯಾಸ್ತಮಯವಾಯಿತೆಂದು ಭಾವಿಸುತ್ತೇನೆ. ನಿಮ್ಮ ಧ್ಯಾನವೇ

ನನಗೆ ಪ್ರಾಣವು ಮತ್ತು ಜೀವವು. ನನ್ನ ಹೃದಯದಲ್ಲಿ ನಿಮ್ಮ ಚರಣದ ಮುದ್ರೆಯನ್ನು ಒತ್ತು, ಮತ್ತು ನನ್ನ ಮುಖದಲ್ಲಿ ಪರಮಾತ್ಮನ ಮಂತ್ರವಾದ ಷಡಕ್ಷರಿಯನ್ನು ಬರೆ ಎಂದು ಪರಮಾತ್ಮನನ್ನು ಕುರಿತು ಬಸವೇಶ್ವರನು ಬೇಡಿಕೊಳ್ಳುತ್ತಾನೆ. ಅಂದರೆ ಧ್ಯಾನ ಮಾಡುವ ಕಾಲದಲ್ಲಿ ತನ್ನನ್ನು ಮರೆತುಬಿಡಬೇಕೆಂದು ಅವನ ಮುಖ್ಯ ಅಭಿಪ್ರಾಯವು.

(೪೬) ಆಡಿ ಕಾಲು ದಣಿಯವು. ನೋಡಿ ಕಣ್ಣು ದಣಿಯವು. ಹಾಡಿ ನಾಲಿಗೆ ದಣಿಯದು. ಇನ್ನೇವೆನಿನ್ನೇವೆ? ನಾ ನಿಮ್ಮ ಕೆಯ್ಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇವೆನಿನ್ನೇವೆ? ಕೂಡಲಸಂಗಮದೇವ ಕೇಳಯ್ಯಾ, ನಿಮ್ಮ ಉದರವ ಬಗಿದಾನು ಹೊಗುವ ಭರವೆನಗೆ.

ಆಡಿ = ಕುಣಿದಾಡಿ; ಇನ್ನೇವೆ = ಇನ್ನೇನು ಮಾಡಲಿ: ಕೆಯ್ಯಾರೆ = ಕೈಯಲ್ಲಿ ಶಕ್ತಿಯಿದ್ದಷ್ಟು; ಬಗಿದು = ಅಗಿದು; ಭರವು = ಅವಸರವು.

ಭಾವಃ – ಪರಮಾತ್ಮನನ್ನು ಕುರಿತು ಎಷ್ಟು ಕುಣಿದಾಡಿದರೂ ನನ್ನ ಕಾಲು ದಣಿಯವು. ಎಷ್ಟು ನೋಡಿದರೂ ನನ್ನ ಕಣ್ಣು ದಣಿಯವು. ಎಷ್ಟು ಹಾಡಿದರೂ ನಾಲಿಗೆ ದಣಿಯದು. ಏನು ಮಾಡಲಿ, ಏನು ಮಾಡಲಿ? ನಾನು ನನ್ನ ಕೈಯ್ಯಲ್ಲಿದ್ದಷ್ಟು ಶಕ್ತಿಯಿಂದ ನಿಮ್ಮನ್ನು ಪೂಜಿಸುತ್ತಿದ್ದೇನೆ. ಏನು ಮಾಡಲಿ, ಏನು ಮಾಡಲಿ? ಹೀಗೆ ಭಕ್ತಿಯ ಆವೇಶವು ಬಸವೇಶ್ವರನಲ್ಲಿ ಉಂಟಾಗಿ, ನಾನು ನಿಮ್ಮ ಹೊಟ್ಟೆಯನ್ನು ಹರಿದು ಒಳಗೆ ಹೊಗುವಂತೆ ಆಗಿದೆ ಎಂದು ಹೇಳುತ್ತಾನೆ. ಧ್ಯಾನದಲ್ಲಿ ಪರಮಾತ್ಮನೊಡನೆ ಸಾಮರಸ್ಯಭಾವವಿರಬೇಕೆಂಬ ಭಾವವು ಇದರಲ್ಲಿದೆ.

(೪೭) ಕಾಮಸಂಗ ನಿಸ್ಸಂಗವಾಗಿ, ಇನ್ನಾವ ಸಂಗವನರಿಯೆನಯ್ಯಾ ಮಿಗೆ ಮಿಗೆ ಒಲಿದೆನಾಗಿ, ಅಗಲಲಾರೆನಯ್ಯ. ನಗೆಮೊಗದರಸ ಅವಧಾರು. ಕೂಡಲಸಂಗಮದೇವ ಬಗಿದು ಹೋಗುವೆ ನಾ ನಿಮ್ಮ ಮನವನು.

ಕಾಮ = ಇಚ್ಛೆ, ಅಭಿಲಾಷೆ; ಮಿಗೆ = ಬಹಳ; ನಗೆಮೊಗ = ನಗುಮುಖ; ಅವಧಾರು = ಲಕ್ಷಿಸು.

ಭಾವಃ— ನನ್ನಲ್ಲಿ ಅನೇಕ ಅಭಿಲಾಷೆಗಳಿವೆ. ಆದರೆ ಅವೆಲ್ಲವೂ ಈಗ ಇಲ್ಲದಾದವು. ಇನ್ನು ಮೇಲೆ ನನಗೆ ಯಾವುದರ ಸಂಗವೂ ಬೇಡ. ನಿಮಗೆ ಅತ್ಯಂತ ಒಲಿದವನಾದ್ದರಿಂದ ನಿಮ್ಮನ್ನು ಬಿಟ್ಟಿರಲಾರೆನು. ನಗುಮುಖದವನಾದ ಕಾರುಣ್ಯನಿಧಿಯೇ ಲಕ್ಷಿಸು. ನಿನ್ನ ಮನಸ್ಸನ್ನು ಅಗಿದು ಅದರೊಳಗೆ ಹೊಗುವೆನು ಎಂದು ಬಸವೇಶ್ವರನು ಇಲ್ಲಿ ನುಡಿದಿದ್ದಾನೆ.

(೩೭) **ಸುರರು, ಕಿನ್ನರರು, ಕಿಂಪುರುಷರೆಂಬವರನಾರು ಬಲ್ಲರು? ಎನ್ನ ಚಿತ್ತವು ನಿಮ್ಮ ಮೇಲೆ ಸಂಗಯ್ಯ. ಎನ್ನ ಚಿತ್ತವು ನಿಮ್ಮ ಮೇಲೆ. ಕೂಡಲಸಂಗಯ್ಯ ಅನ್ಯವೆಂಬುದನರಿಯೆನಯ್ಯ.**

ಭಾವಃ—ದೇವತೆಗಳಿರುವ ಸ್ವರ್ಗಲೋಕ, ಮತ್ತು ಕಿನ್ನರರು ಕಿಂಪುರುಷರಿರುವ ಲೋಕಗಳು ಬಹು ಸುಖವಾದವುಗಳೆಂದು ಜನರು ಹೇಳುತ್ತಾರೆ. ಆದರೆ ಅವುಗಳನ್ನಾರು ಬಲ್ಲರು? ನನ್ನ ಮನಸ್ಸು, ಎಲೋ ಪರಮಾತ್ಮನೇ, ನಿನ್ನ ಮೇಲೆ ಇದೆ. ಎಲೋ ಲಿಂಗವೇ, ನಿನ್ನ ಮೇಲೆ ಮಾತ್ರ ಇದೆ. ನಾನು ಬೇರೊಂದನ್ನು ಅರಿಯೆನೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ. ಅಂದರೆ ಪರಮಾತ್ಮನ ಧ್ಯಾನದಲ್ಲಿಯೇ ನಿಜವಾದ ಸುಖವಿರುತ್ತದೆಂದು ಅವನ ಭಾವವು.

(೩೮) **ಅಂಕ ಕಳನೇರಿ ಕೈಮರೆದಿರ್ದಡೆ, ಮಾರಾಂಕ ಬಂದಿರುವುದ ಮಾಬನೇ? ನಿಮ್ಮ ನೆನೆವ ಮತಿ ಮರೆದಿರ್ದರೆ ಪಾಪ ತನುವನಂಡಲೆಯದೆ ಮಾಬುದೇ? ಕೂಡಲಸಂಗಯ್ಯನ ನೆನೆದರೆ, ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯ.**

ಅಂಕ = ಯುದ್ಧ, ಸಂಗ್ರಾಮ; ಕಳ = ರಣರಂಗ; ಮಾರಾಂಕ = ಇದಿರಾಳ್ಗಿ, ಶತ್ರು; ಮಾಬನೇ = ಬಿಡುವನೇ; ಅಂಡಲೆ= ಕ್ಲೇಶ ಪಡಿಸು.

ಭಾವಃ—ಸೈನಿಕನು ಯುದ್ಧರಂಗವನ್ನೇರಿ ಯುದ್ಧ ಮಾಡುವದನ್ನು ಮರೆತರೆ, ವೈರಿಯು ಅವನ ಮೇಲೇರಿ ಹೋಗಿ ಅವನನ್ನು ಕೊಲ್ಲುವದನ್ನು ಬಿಡುವನೇ? ಪರಮಾತ್ಮನನ್ನು ಧ್ಯಾನ ಮಾಡುವಲ್ಲಿ ಅವನನ್ನು ಮರೆತು ಬಿಟ್ಟರೆ, ಮನುಷ್ಯನು ಮಾಡಿದ ಪಾಪವು ಅವನನ್ನು ಕ್ಲೇಶ ಪಡಿಸದೆ ಬಿಡುವದೇ? ಆದರೆ ಪರಮಾತ್ಮನನ್ನು ನೆನೆವಲ್ಲಿ ಮನುಷ್ಯನು ಮಾಡಿದ ಪಾಪವು ಬೆಂಕಿಯಲ್ಲಿ ಹಾಕಿದ ಅರಗಿನಂತೆ ಕರಗಿ ಹೋಗುತ್ತದೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ.

ಆತ್ಮಾರ್ಪಣ.

(೩೯) **ಭವರೋಗ ವೈದ್ಯನೆಂದು, ನಾ ನಿಮ್ಮ ಮರೆಹೊಕ್ಕೆ. ಭಕ್ತಿದಾಯಕ ನೀನು. ಕರುಣಿಸು ಲಿಂಗ ತಂದೆ. ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ, ಎನುತಿದ್ದಿತೆನ್ನ ಮನವು ಕೂಡಲಸಂಗಮದೇವಂಗೆ ಶರಣೆಂದಿತ್ತೆನ್ನ ಮನವು**

ಭಾವಃ—ಭಕ್ತಿಯಲ್ಲಿ ಆತ್ಮಾರ್ಪಣ ಭಾವವಿರಬೇಕು. ಆತ್ಮಾರ್ಪಣವೆಂದರೆ ಪರಮಾತ್ಮನಿಗೆ ಮೊರೆ ಹೋಗುವದು. ಪರಮಾತ್ಮನು ಈ ಭವವೆಂಬ ವ್ಯಾಧಿಗೆ ವೈದ್ಯನಂತಿದ್ದಾನೆ. ಅವನಿಗೆ ಮೊರೆಹೊಕ್ಕರೆ ಅವನು ಈ ಭವವ್ಯಾಧಿಯನ್ನು ದೂರ ಮಾಡುತ್ತಾನೆ. ಅವನು ಭಕ್ತಿ ಎಂಬ ಔಷಧವನ್ನು ಕೊಡುತ್ತಾನೆ. ಆದ್ದರಿಂದ ಎಲೋ ಮಹಾದೇವನೇ, ಲಿಂಗ ತಂದೆಯೇ ಕರುಣಿಸು, ನಿನಗೆ ಶರಣು ಎಂದು ಬಸವೇಶ್ವರನು ಇಲ್ಲಿ ನುಡಿಯುತ್ತಾನೆ.

(೪೦) **ಎನ್ನ ವಾಮ ಕ್ಷೇಮ ನಿಮ್ಮದಯ್ಯಾ! ಎನ್ನ ಹಾನಿವೃದ್ಧಿ ನಿಮ್ಮದಯ್ಯಾ! ಎನ್ನ ಮಾನಾಪಮಾನವು ನಿಮ್ಮದಯ್ಯಾ! ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವ?**

ವಾಮ = ವಿಪತ್ತು; ಕ್ಷೇಮ = ಕಲ್ಯಾಣ; ದಿಮ್ಮಿತ್ತು=ದೊಡ್ಡದು, ಗಾತ್ರವುಳ್ಳದ್ದು.

ಭಾವಃ— ಆತ್ಮಾರ್ಪಣದಲ್ಲಿ ನಾನೆಂಬ ಭಾವವು ಇರತಕ್ಕದ್ದಲ್ಲ. ಎಲ್ಲವೂ ನನ್ನಿಂದಾಗುತ್ತದೆಂದು ತಿಳಿಯಬಾರದು. ಯಾಕಂದರೆ ಜಗತ್ತಿನಲ್ಲಿ ನಡಿಯುವ ಕ್ರಿಯೆಗಳು ಪರಮಾತ್ಮನು ಹಾಕಿಕೊಟ್ಟ ನೇಮದಂತೆ ನಡೆಯುತ್ತವೆ. ಇದನ್ನು ಮನುಷ್ಯನು ತಿಳಿದು ವರ್ತಿಸತಕ್ಕದ್ದು. ಆದ್ದರಿಂದ ನನಗಾಗುವ ವಿಪತ್ತುಗಳು, ಕ್ಷೇಮಗಳು, ಹಾನಿ ವೃದ್ಧಿಗಳು, ಮಾನಾಪಮಾನಗಳು, ಪರಮಾತ್ಮನಿಗರ್ಪಿಸಿ ಮನುಷ್ಯನು ಸಮಾಧಾನಿಯಾಗಿರಬೇಕು. ಬಳ್ಳಿಯು ಅತ್ಯಂತ ಮೃದುವಾದದ್ದು. ಆದರೂ ಅದರ ಕಾಯಿಯು ಅದಕ್ಕೆ ಭಾರವಾದುದಲ್ಲ. ಅಂಥದನ್ನು ಅದು ರಕ್ಷಿಸುತ್ತದೆ. ಹಾಗೆಯೇ ಪರಮಾತ್ಮನಲ್ಲಿ ಅರ್ಪಣ ಭಾವವನ್ನು ತಾಳಿದಲ್ಲಿ ಅವನು ಮನುಷ್ಯನನ್ನು ರಕ್ಷಿಸುತ್ತಾನೆ.

(೪೧) ಎನ್ನ ಆಪತ್ತು ಸುಖದುಃಖ ನೀವೇ ಕಂಡಯ್ಯಾ! ಪುತ್ರಾರೂ ಇಲ್ಲ. ಹರಹರಾ ನೀವೇ ಕಂಡಯ್ಯಾ! ಎನ್ನ ಮಾತಾಪಿತನು ನೀವೇ ಕಂಡಯ್ಯಾ ಕೂಡಲಸಂಗಮದೇವಾ.

ಆಪತ್ತು = ಸಂಕಟ; ಮಾತಾಪಿತ = ತಂದೆತಾಯಿ.

ಭಾವಃ— ಜಗತ್ತನ್ನು ಸಂರಕ್ಷಿಸುವವನು ಪರಮಾತ್ಮನು, ಅವನೇ ತಂದೆತಾಯಿಯು. ಚಿಕ್ಕ ಮಗುವಿನ ಆಪತ್ತು, ಸುಖದುಃಖಗಳನ್ನು ಹೇಗೆ ತಂದೆತಾಯಿಗಳು ನೋಡುತ್ತಾರೋ ಹಾಗೆಯೇ ಪರಮಾತ್ಮನು ನನ್ನನ್ನು ನೋಡುತ್ತಾನೆ. ಆದರೆ ಚಿಕ್ಕ ಮಗುವು ಹೇಗೆ ತನ್ನ ತಾಯಿ ತಂದೆಗಳ ಮೇಲೆ ವಿಶ್ವಾಸವಿಟ್ಟು ನಡೆಯುತ್ತದೆಯೋ ಹಾಗೆಯೇ ನೀನು ಪರಮಾತ್ಮನಲ್ಲಿ ವಿಶ್ವಾಸವಿಟ್ಟು ನಡಿಯಬೇಕು.

(೪೨) ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ ಸಂಸಾರವೇನವನ, ಬಾಳುವೇನವನ, ಬೀಳುವೇನವನ, ಸಂಸಾರವೇನವನ, ನಡೆಯೇನವನ, ನುಡಿಯೇನವನ, ಸಂಸಾರವೇನವನ? ಕರ್ತ ಕೂಡಲಸಂಗಮದೇವ, ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?

ದೃಷ್ಟಿಯಾರೆ = ಕಣ್ಣುತುಂಬ.

ಭಾವಃ— ಪರಮಾತ್ಮನಲ್ಲಿ ಶರಣು ಹೊಕ್ಕವನು ಅವನ ಸೇವೆ ಮಾಡಬೇಕು. ಅಂದರೆ ಅವನ ಮೊರೆಹೊಕ್ಕು ಜಗತ್ತಿನಲ್ಲಿ ಮಾಡತಕ್ಕ ಯೋಗ್ಯ ಕಾರ್ಯಗಳನ್ನು ಮಾಡಬೇಕು. ಲಿಂಗದ ಧ್ಯಾನದಲ್ಲಿದ್ದರೆ ಪರಮಾತ್ಮನ ಸ್ಮರಣೆಯಾಗುತ್ತದೆ. ಅದ್ದರಿಂದ ಹೊತ್ತಾರೆ ಎದ್ದು ಪರಮಾತ್ಮನ ಚಿನ್ಹವಾದ ಲಿಂಗವನ್ನು ಕಣ್ಣುತುಂಬ ನೋಡಿ, ಪರಮಾತ್ಮನನ್ನು ಧ್ಯಾನಿಸಬೇಕು. ಹೀಗೆ ಮಾಡದವನ ಬಾಳುವೆ, ಸಂಸಾರ, ವರ್ತನೆ, ನುಡಿ ಎಲ್ಲವೂ ವ್ಯರ್ಥವೆಂದು ಬಸವೇಶ್ವರನು ಹೇಳುತ್ತಾನೆ.

(೪೩) ಎಚ್ಚ ವಾಲಿಯು ಕೂಂದ. ಕಟ್ಟಿದ ಶರಧಿಯು. ಹತ್ತು ತಲೆಯ ರಾವಣನ ಒಂದೇ ಅಂಬಿನಲ್ಲಿ ಮಡುಹಿದ, ಛಲದಿ ಲಂಕಾದ್ವೀಪವ ನೆಲವಣ್ಣ ಮಾಡಿದ, ಕಲಿ ವಿಭೀಷಣಂಗೆ ಪಟ್ಟವ ಕಟ್ಟಿದ ರಾಮನ ತೋರಾ. ಮಾಯದ ಸಂಸಾರವ ನೆಚ್ಚಿ ಕೆಟ್ಟು ಬರುದೊರೆ ಪೋಗಬೇಡ. ಕರ್ತ ಕೂಡಲಸಂಗಂಗೆ ಶರಣೆನ್ನಿರಯ್ಯಾ.

ಶರಧಿ = ಸಮುದ್ರ; ಅಂಬು = ಬಾಣ; ಮಡುಹು = ಕೊಲ್ಲು, ಸಂಹಾರ ಮಾಡು.

ಭಾವಃ— ಜಗತ್ತಿನಲ್ಲಿ ಸ್ಥಿರವಾದದ್ದು ಯಾವುದೂ ಇಲ್ಲ. ಅನೇಕ ಮಹತ್ಕಾರ್ಯಗಳನ್ನು ಮಾಡಿದ ರಾಮನು ಸಹ ಸ್ಥಿರವಾದವನಲ್ಲ. ಅವನು ವಾಲಿಯನ್ನು ಬಾಣದಿಂದ ಎಸೆದು ಕೊಂದುಹಾಕಿದನು. ಸಮುದ್ರವನ್ನು ಕಟ್ಟಿದನು. ಹತ್ತು ತಲೆಯ ರಾವಣನನ್ನು ಒಂದೇ ಅಂಬಿನಲ್ಲಿ ಕೊಂದನು. ಲಂಕಾದ್ವೀಪವನ್ನು ನೆಲಸಮ ಮಾಡಿದನು. ಮತ್ತು ವಿಭೀಷಣನಿಗೆ ಪಟ್ಟಗಟ್ಟಿದನು. ಆದರೆ ಆ ರಾಮನು ಈಗ ಅಸ್ತಿತ್ವದಲ್ಲಿ ಇಲ್ಲ. ಆದ್ದರಿಂದ ಮಾಯಾಮಯವಾದ ಈ ಸಂಸಾರವನ್ನು ನಂಬಿ ಕೆಟ್ಟು ಹೋಗಬೇಡ. ಹೀಗೆ ನಂಬಿದರೆ, ನೀರಡಿಕೆಯಾದಲ್ಲಿ ನೀರು ಕುಡಿಯಲು ನೀರಿಲ್ಲದ ಹೊಳೆಗೆ ಹೋದಂತೆಯೇ ಸರಿ. ಆದರೆ ಪರಮಾತ್ಮನಿಗೆ ಶರಣು ಹೋದರೆ, ನೀನು ಶಾಶ್ವತವಾದ ಪದವಿಯನ್ನು ಹೊಂದುವಿ.

(೪೪) ಆಳಿಗೊಂಡಿಹರೆಂದು ಅಂಜಲದೇಕೆ? ನಾಸ್ತಿಕವಾಡಿಹರೆಂದು, ನಾಚಲದೇಕೆ? ಆರಾದಡಾಗಲಿ, ಶ್ರೀ ಮಹಾದೇವಂಗೆ ಶರಣೆನ್ನಿ. ಏನೂ ಅರಿಯೆನೆಂದು ಮೌನಗೊಂಡಿರಬೇಡ. ಕೂಡಲಸಂಗಮದೇವರ ಮುಂದೆ ದಂದಣ, ದತ್ತಣ ಎನ್ನಿ.

ಆಳಿಗೊಡು = ವಂಚನೆಮಾಡು.

ಭಾವಃ— ಸರಿಯಾದ ಕಾರ್ಯ ಮಾಡುವಲ್ಲಿ ಯಾರಿಗೂ ಅಂಜಬಾರದು. ಜನರು ನಿನಗೆ ವಂಚನೆ ಮಾಡಬಹುದು. ಅದಕ್ಕೆ ಅಂಜಬಾರದು. ನೀನು ನಾಸ್ತಿಕನೆಂದು ಅವರು ಅನ್ನಬಹುದು. ಅದಕ್ಕೆ ನಾಚಬಾರದು. ಪರಮಾತ್ಮನಿಗೆ ಶರಣೆನ್ನುವದನ್ನು ಎಂದೂ ಬಿಡಬಾರದು. ಆಗ ನೀನು ನನಗೆ ಏನೂ ತಿಳಿಯುವದಿಲ್ಲೆಂದು ಮೌನವಾಗಿರಬಾರದು. ಪರಮಾತ್ಮನ ಇದಿರಿನಲ್ಲಿ ಕುಣಿಯಲಿಕ್ಕಾದರೂ ಬರುತ್ತದೆಯಷ್ಟೇ. ಅಷ್ಟನ್ನಾದರೂ ನೀನು ಮಾಡಬೇಕು.

(೪೫) ಎಂತಕ್ಕೆ? ಎಂತಕ್ಕೆ? ಹಡೆದ ಕಾಯ ಬಿಯ್ಯವಾಗದ ಮುನ್ನ, ಅಟ್ಟಿಣ್ಣಿರೋ. ಬೆರಣಿಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟಿಣ್ಣಿರೋ. ಮರಳಿ ಭವಕ್ಕೆ ಬಹೆ. ಬಾರದಿಹೆ. ಕರ್ತ ಕೂಡಲಸಂಗಂಗೆ ಶರಣೆನ್ನಿರೋ.

ಬಿಯ್ಯವಾಗು = ವ್ಯಯವಾಗು, ನಾಶವಾಗು; ಬೆರಣಿ = ಕುಳ್ಳು.

ಭಾವಃ— ನಿನ್ನಲ್ಲಿ ಶಕ್ತಿ ಇದ್ದಾಗಳೇ ಪರಮಾತ್ಮನ ಕಾರ್ಯವನ್ನು ಮಾಡಬೇಕು. ಗಿಡದ ಮೇಲೆ ಹಣ್ಣಾಗಿ ಅದು ಕೆಳಗೆ ಬಿದ್ದು ಕೊಳೆತುಹೋಗುವ ಪೂರ್ವದಲ್ಲಿಯೋ ಅದನ್ನು ಅಡಿಗೆ ಮಾಡಿ ಉಣ್ಣಬೇಕು. ಕುಳ್ಳು ಇದ್ದ ಸ್ಥಳದಲ್ಲಿಯೋ ವೇಳೆ ಹೋಗುವ ಮೊದಲು ಅಲ್ಲಿ ಅಡಿಗೆ ಮಾಡಿ ಉಣ್ಣಬೇಕು. ಈ ಜಗತ್ತು ಶ್ರೇಷ್ಠವಾದದ್ದು. ಇಲ್ಲಿಗೆ ನೀನು ಸುದೈವದಿಂದ ಬಂದಿರುವಿ. ಮುಂದಿನ ಜನ್ಮದಲ್ಲಿ ಇಲ್ಲಿಗೆ ಹುಟ್ಟಿ ಬರುವಿಯೋ ಹೇಗೆಂಬುದು ಯಾರಿಗೆ ಗೊತ್ತು? ಆದ್ದರಿಂದ ನಿನ್ನ ಕರ್ತನಾದ ಪರಮಾತ್ಮನಿಗೆ ಈಗಳೇ ಶರಣು ಹೋಗು.

(೪೬) ಅಂಗದ ಸೋಟವು ಸಿಂಗರದ ಗಾತ್ರವು ಹಿಂಗದು ಮನದಲ್ಲಿ. ನಾನಾ ವಿಕಾರದಿ ಬೆಂದಿಹೆನೆಂದರಿಯಲಿಕ್ಕಿಲ್ಲಾಗಿ ಸಂದೇಹ ಬಿಡದು. ಮುಂದುಗಾಣದು ಲೋಕ. ಬೆಂದ ಮಾಯೆಗಂಜಿ ನಿಮ್ಮ ಮರೆವೊಕ್ಕೆ ಕೂಡಲಸಂಗಮದೇವಾ.

ಗಾತ್ರ = ಶರೀರ, ಶರೀರದ ಅವಯವ.

ಭಾವಃ—ಮನುಷ್ಯನು ಹೊರಗಿನ ವೈಭವಕ್ಕೆ ಮೆಚ್ಚಿದವನು. ಅವನು ತನ್ನ ಶರೀರದ ಬಾಹ್ಯ ನೋಟದಲ್ಲಿ ಮತ್ತು ಅದರ ಅವಯವಗಳ ಶೃಂಗಾರದಲ್ಲಿ ಮಗ್ನನಾಗಿರುತ್ತಾನೆ. ಆದರೆ ರೋಗ ಮೊದಲಾದ ವಿಕಾರಗಳು ಅವುಗಳನ್ನು ಆವರಿಸಲು ಅವುಗಳ ಸೌಂದರ್ಯವು ನಷ್ಟವಾಗುತ್ತದೆಂಬುದು ಅವನಿಗೆ ಗೊತ್ತಾಗುವದಿಲ್ಲ. ಈ ವಿಷಯದಲ್ಲಿ ಅವನಿಗೆ ಎಷ್ಟೂ ಸಂದೇಹವು ಉಂಟಾಗುವದಿಲ್ಲ. ಅವನಿಗೆ ಮುಂದಿನದೂ ತೋರುವದಿಲ್ಲ. ಆದ್ದರಿಂದ ನಾನು ಈ ಪ್ರಪಂಚು ಮಾಯಾಮಯವಾದದ್ದೆಂದು ತಿಳಿದು ಅದರ ಬಾಧೆಗೆ ಅಂಜಿ ಪರಮಾತ್ಮನಿಗೆ ಮೊರೆ ಹೊಗುವೆನು.

ಪರಮಾತ್ಮನ ಕಾರುಣ್ಯ.

(೪೭) ಸಮುದ್ರದೊಳಗಣ ಸಿಂಪಿನಂತೆ, ಬಾಯ ಬಿಡುತಿದ್ದೆನಯ್ಯಾ. ನೀವಲ್ಲದೆ ಮತ್ತಾರೂ ಎನ್ನನರಿವರಿಲ್ಲ ನೋಡಯ್ಯ. ಕೂಡಲಸಂಗಮದೇವ, ನೀನಲ್ಲದೊಳಕೊಂಬುವರಿಲ್ಲವಯ್ಯ.

ಅರಿ = ತಿಳಿ; ಒಳಕೊಳ್ಳು = ಸ್ವೀಕರಿಸು.

ಭಾವಃ— ಉಚ್ಚ ಸ್ಥಿತಿಯನ್ನು ಹೊಂದುವೆನೆಂಬ ಉತ್ಕಟೇಚ್ಛೆಯು ಮನುಷ್ಯನಲ್ಲಿ ಅವಶ್ಯವಾಗಿ ಬೇಕು. ಈ ಇಚ್ಛೆ ಇರದಿದ್ದರೆ ಅವನಲ್ಲಿ ಪ್ರಗತಿಯುಂಟಾಗಲಾರದು. ನಾವು ನೋಡುವದೇನಂದರೆ, ಸಮುದ್ರದಲ್ಲಿಯ ಸಿಂಪು ತನ್ನಲ್ಲಿ ಎಂದು ಮುತ್ತುಗಳಾಗುವವೋ ಎಂಬುದನ್ನೇ ನಿರೀಕ್ಷಿಸುತ್ತ ತನ್ನ ಮುಚ್ಚಳುಗಳನ್ನು ತೆರೆದುಕೊಂಡು ಸಮುದ್ರತಳದಲ್ಲಿ ಅದು ಬಿದ್ದಿರುತ್ತದೆ. ಸ್ವಾತಿಯ ಹನಿಗಳು ಅದರಲ್ಲಿ ಬಿದ್ದ ಕೂಡಲೆ ಆ ಮುಚ್ಚಳಗಳನ್ನು ಮುಚ್ಚಿಕೊಳ್ಳುತ್ತದೆ. ಮತ್ತು ಅದರಲ್ಲಿ ಮುತ್ತುಗಳಾಗುತ್ತವೆ. ಆದರೆ ಸ್ವಾತಿಯ ಹನಿಗಳು ಅದರಲ್ಲಿ ಬೀಳುವದು ಪರಮಾತ್ಮನ ಅಧೀನವು. ಹಾಗೆಯೇ ಮನುಷ್ಯನಲ್ಲಿ ಭಕ್ತಿಯು ಉಂಟಾಗುವದು ಪರಮಾತ್ಮನ ಕಾರುಣ್ಯದಿಂದ. ಆದ್ದರಿಂದ ಪರಮಾತ್ಮನಲ್ಲದೆ ನನ್ನನ್ನು ಕಾಣುವವರಿಲ್ಲ. ಎಲೋ ಪರಮಾತ್ಮನೇ, ನೀನು ನನ್ನನ್ನು ಒಳಕೊಳ್ಳು ಎಂದು ಬಸವೇಶ್ವರನು ಅವನನ್ನು ಬೇಡಿಕೊಳ್ಳುತ್ತಾನೆ.

(೪೮) ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು. ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯ. ನೆರೆಯದ ವಸ್ತು ನೆರೆವುದು ನೋಡಯ್ಯ. ಅರಸು ಪರಿವಾರ ಕೈವಾರ ನೋಡಯ್ಯ. ಹರನು ನಿರಂಜನ ಮರೆದ ಕಾಲಕ್ಕೆ ತುಂಬಿದ ಹರವಿಯು ಕಲ್ಲು ಕೊಂಡಂತೆ ಕೂಡಲಸಂಗಮದೇವಾ.

ಈವ = ಕೊಡುವ; ಸಿರಿ = ಶ್ರೀಮಂತಿಕೆ; ಬಕ್ಕು = ಬರುವದು; ಹೆದ್ದೊರೆ = ದೊಡ್ಡ ತೊರೆ, ದೊಡ್ಡ ಹೊಳೆ; ನೆರೆಯದ = ಕೂಡದ; ಕೈವಾರ = ಕೈ ಎತ್ತರಿಸಿ ಸ್ತುತಿಸು; ನಿರಂಜನ = ಕಪ್ಪು ಇಲ್ಲದವ, ಶುದ್ಧ; ಕೊಂಡಂತೆ = ಹೊಡೆದಂತೆ.

ಭಾವಃ— ಹರನ ಕೃಪೆಯಾದರೆ ಶ್ರೀಮಂತಿಕೆಯು ತಾನೇ ಬೆನ್ನಲ್ಲಿ ಹರಿದು ಬರುತ್ತದೆ. ದೊಡ್ಡ ಹೊಳೆಯು ಕೆರೆಯಲ್ಲಿ ಹರಿದು ಬಂದರೆ

ಆ ಕೆರೆಯು ಹೇಗೆ ಕೂಡಲೆ ತುಂಬಿ ಹೋಗುತ್ತದೋ ಹಾಗೆ ಆಗ ಆಗುವದು. ಎಂದೂ ಬರಲಿಕ್ಕಿಲ್ಲೆಂದು ಭಾವಿಸಿದ ವಸ್ತು ತಾನಾಗಿಯೇ ಕೈಸೇರಿ ಬಿಡುವದು. ಅರಸು ಮತ್ತು ಅವನ ಪರಿವಾರ ಸಹ ಅವನ ಪರಿಚಾರಕರಾಗುವರು. ಆದರೆ ಪರಮಾತ್ಮನು ಒಂದು ವೇಳೆ ಮರೆತು ಬಿಟ್ಟರೆ ಮನುಷ್ಯನ ಸ್ಥಿತಿಯು ತುಂಬಿದ ಹರವಿಗೆ ಕಲ್ಲಿಲೊಗೆದರೆ ಅದು ಹೇಗೆ ಒಡೆದು ನೀರು ಹೊರಚಲ್ಲಿ ಹೋಗುತ್ತದೋ ಹಾಗೆ ಆಗಿ ಬಿಡುತ್ತದೆ. ಅಂದರೆ ಅವನಿಗೆ ಕಠಿಣ ಕಾಲವು ಪ್ರಾಪ್ತವಾಗುತ್ತದೆ.

(೪೯) 'ಅಯ್ಯಾ' 'ಅಯ್ಯಾ' ಎಂದು ಕರೆವುತ್ತಲಿದೇನೆ. 'ಅಯ್ಯಾ' 'ಅಯ್ಯಾ' ಎಂದು ಒರಲುತ್ತಲಿದೇನೆ. 'ಓ' ಎನ್ನಲಾಗದೇ ಅಯ್ಯಾ? ಆವಾಗಳೂ ನಿಮ್ಮ ಕರೆವುತ್ತಲಿದೇನೆ. ಮೌನವೇ ಕೂಡಲಸಂಗಮ ದೇವಾ ?

ಒರಲು = ದುಃಖದಿಂದ ಕೂಗು; ಆವಾಗಳೂ = ಯಾವಾಗಲೂ.

ಭಾವಃ—ಎಲೋ ಪರಮಾತ್ಮನೇ, ನಿನ್ನ ಹೆಸರ್ಗೊಂಡು ನಾನು ಕರೆಯುತ್ತಲಿದ್ದೇನೆ. ಅತ್ಯಂತ ದುಃಖದಿಂದ ನಿನ್ನನ್ನು ನಾನು ಕರೆಯುತ್ತಲಿದ್ದೇನೆ. 'ಓ' ಎಂದು ನೀನು ಪ್ರತ್ಯುತ್ತರ ಏಕೆ ಕೊಡುವದಿಲ್ಲ? ಯಾವಾಗಲೂ ನಿನ್ನನ್ನು ಕರೆಯುತ್ತಲಿದ್ದೇನೆ. ಎಲೋ ಪರಮಾತ್ಮನೇ ನೀನು ಏಕೆ ಸುಮ್ಮನೆ ಇದ್ದೀ?

(೫೦) ಲೇಸ ಕಂಡು, ಮನೆ ಬಯಸಿ, ಆಸೆ ಮಾಡಿದಡಿಲ್ಲ ಕಂಡಯ್ಯಾ. ತಾಳ ಮರಕ್ಕೆ ಕೈಯ್ಯ ನೀಡಿ, ಮೇಲೆ ನೋಡಿ, ಗೋಣು ನೋಂದುದಯ್ಯ. ಕೂಡಲಸಂಗಮದೇವ ಕೇಳಯ್ಯಾ, ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ.

ಈವ = ಕೊಡುವ.

ಭಾವಃ— ಹಿತವಾದದ್ದನ್ನು ಕಂಡು ಅದನ್ನು ಬಯಸುತ್ತ ಬರೀ ಆಸೆ ಮಾಡುತ್ತ ಕುಳಿತರೆ ಸಾಧಿಸಲಾರದು. ತಾಳ ಮರದ ಮೇಲಿದ್ದ ಹಣ್ಣನ್ನು ನೋಡಿ ಅದರ ಕೆಳಗೆ ನಿಂತು ಮೇಲೆ ಕಯ್ಯ ನೀಡಿ ಆಸೆ ಮಾಡುತ್ತ ಕುಳಿತರೆ, ಆ ಹಣ್ಣು ನಿನ್ನ ಕೈಗೆ ಬರಲಾರದು. ನಿನ್ನ ಗೋಣು ಮಾತ್ರ ನೊಯ್ಯುವದು. ಎಲೋ ಪರಮಾತ್ಮನೇ, ನೀನು ದಯಾಮಯನಾಗಿ ನೀನು ಕೊಡುವ ಕಾಲಕ್ಕಲ್ಲದೆ ಯಾವದೂ ನನಗೆ ಬರಲಾರದು.

(೫೧) ಕೆಸರಲ್ಲಿ ಬಿದ್ದ ಪಶುವಿನಂತೆ, ಅನು ದೆಸೆದೆಸೆಗೆ ಬಾಯ ಬಿಡುತಿದ್ದೆನೆಯಯ್ಯಾ ! ಆರೈವರಿಲ್ಲ, ಅಕಟಕಟಾ, ಪಶುವೆಂದೆನ್ನ ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ.

ಪಶು = ಆಕಳು; ದೆಸೆದೆಸೆಗೆ = ದಿಕ್ಕುದಿಕ್ಕಿಗೆ; ಆರೈ = ಕಾಯು.

ಭಾವಃ— ಆಕಳು ಕೆಸರಲ್ಲಿ ಬೀಳಲು, ಅದು ಹಂಬಲಿಸುತ್ತ ಎಲ್ಲ ಕಡೆಗೂ ನೋಡುತ್ತ ಬಾಯಿ ಬಿಡುತ್ತದೆ. ತನ್ನನ್ನು ಯಾರು ರಕ್ಷಿಸುವರೋ ಎಂಬುದನ್ನು ಅದು ನಿರೀಕ್ಷಿಸುತ್ತಿರುತ್ತದೆ. ಇಂಥ ಸ್ಥಿತಿಯಲ್ಲಿ ಅದರ ಕೊಂಬು ಹಿಡಿದು ಎತ್ತಿ ಉಳಿಸುವವನು ಪರಮಾತ್ಮನೇ ಹೊರ್ತು ಅದಕ್ಕೆ ಬೇರೆ ಯಾರೂ ಗತಿ ಇಲ್ಲ. ಹಾಗೆಯೇ ನನ್ನನ್ನು ಉಳಿಸು.

(೫೨) ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ, 'ಅಂಬೆ, ಅಂಬೆ,' ಎಂದು ಕರೆಯುತ್ತಲಿದೇನೆ. 'ಅಂಬೆ, ಅಂಬೆ,' ಎಂದು ಒರಲುತ್ತಲಿದೇನೆ, ಕೂಡಲಸಂಗಮದೇವ ಬಾಳು ಬಾಳೆಂಬನ್ನಕ್ಕ.

ಹೊಲಬುಗೆಟ್ಟ = ದಿಕ್ಕುಗೆಟ್ಟ; ಪಶು = ಹಸು, ಆಕಳು; ಒರಲು = ಗಾಬರಿಯಾಗಿ ಕೂಗು.

ಭಾವಃ— ಅಡವಿಯಲ್ಲಿ ದಿಕ್ಕುಗೆಟ್ಟು ಗಾಬರಿಯಾದ ಆಕಳಿನಂತೆ ನಾನು 'ಅಂಬಾ ಅಂಬಾ' ಎಂದು ಕರೆಯುತ್ತಲಿದ್ದೇನೆ. 'ಅಂಬಾ ಅಂಬಾ' ಎಂದು ಒರಲುತ್ತಲಿದ್ದೇನೆ. ಎಲೋ ಪರಮಾತ್ಮನೇ, ನೀನು ನನಗೆ 'ಕ್ಷೇಮದಿಂದಿರು, ಕ್ಷೇಮದಿಂದಿರು' ಎಂದು ಅನ್ನುವ ವರೆಗೂ ನಾನು ನಿನ್ನನ್ನು ಕರೆಯುತ್ತಿದ್ದೇನೆ.

(೫೩) ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲ. ಅಕಟಕಟಾ ಶಿವ ನಿನಗಿನಿತು ಕೃಪೆ ಇಲ್ಲ. ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕ ದೂರನ ? ಏಕೆ ಹುಟ್ಟಿಸಿದೆ ? ಕೂಡಲಸಂಗಮದೇವ ಕೇಳಯ್ಯಾ, ಎನಗಾಗಿ ಮತ್ತೊಂದು ತರುಮರಾದಿಗಳಿದ್ದಿಲ್ಲವೇ ?

ಇನಿತು = ಇಷ್ಟು.

ಭಾವಃ— ಅಯ್ಯೋ ಅಯ್ಯೋ, ಶಿವನೇ, ನಿನಗೆ ಸ್ವಲ್ಪಾದರೂ ಕರುಣವಿಲ್ಲವೇ? ಅಯ್ಯೋ ಅಯ್ಯೋ, ಶಿವನೇ, ನಿನಗೆ ಸ್ವಲ್ಪಾದರೂ

ಕೃಪೆ ಇಲ್ಲ. ಇಹಲೋಕವಲ್ಲಿ ದುಃಖದಿಂದ ಕಾಲಕಳೆಯುತ್ತಿರುವ ನನ್ನನ್ನು ಏಕೆ ಹುಟ್ಟಿಸಿದೆ? ಪರಲೋಕದಿಂದ ದೂರಾಗಿರುವ ನನ್ನನ್ನು ಏಕೆ ಹುಟ್ಟಿಸಿದೆ? ನಾನು ಮಾನವ ಜನ್ಮಕ್ಕೆ ಬಂದು ಹೆಚ್ಚಿನ ಕಾರ್ಯ ಮಾಡಬೇಕು. ಇದು ನನಗೆ ಆಗದ್ದರಿಂದ ನನ್ನನ್ನು ಮಾನವ ಜನ್ಮಕ್ಕೆ ತರದೆ ಎಲ್ಲಿಯೋ ಒಂದು ಗಿಡವಾಗಿ ಇಲ್ಲವೆ ಮರನಾಗಿ ಹುಟ್ಟಿಸಬಾರದಿತ್ತೇ, ಎಂದು ಬಸವೇಶ್ವರನು ಪರಮಾತ್ಮನನ್ನು ಕೇಳಿಕೊಳ್ಳುತ್ತಾನೆ.

(೫೪) ನೀನೊಲಿದರೆ, ಕೊರಡು ಕೊನರುವದಯ್ಯಾ! ನೀನೊಲಿದರೆ, ಬರಡು ಹಯನಹುದಯ್ಯಾ! ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯಾ! ನೀನೊಲಿದರೆ, ಸಕಲ ಪಡಿಪದಾರ್ಥ ಇದಿರಲಿಪ್ಪವು ಕೂಡಲಸಂಗಮದೇವಾ.

ಕೊನರು = ಚಿಗಿ; ಪಡಿಪದಾರ್ಥ = ಅವಶ್ಯವಾದದ್ದಕ್ಕಿಂತಲೂ ಹೆಚ್ಚಿಗೆ ಕೊಟ್ಟ ಪದಾರ್ಥ, ಕಾಣಿಕೆ, ಇಚ್ಛಿತ ವಸ್ತು.

ಭಾವಃ— ಪರಮಾತ್ಮನೇ, ನೀನೊಲಿದರೆ, ಒಣ ಕೊರಡು ಸಹ ಚಿಗಿಯುತ್ತದೆ. ನೀನೊಲಿದರೆ ಬರಡಾಕಳು ಸಹ ಹಾಲನ್ನು ಕೊಡುತ್ತದೆ. ನೀನೊಲಿದರೆ ವಿಷವು ಅಮೃತವಾಗುತ್ತದೆ. ನೀನೊಲಿದರೆ ಇಚ್ಛಿತ ಪದಾರ್ಥಗಳೆಲ್ಲವೂ ನನ್ನಿದಿರಿಗೆ ಬರುತ್ತವೆ. ಹೀಗೆ ಬಸವೇಶ್ವರನು ಹೇಳಿ ಪರಮಾತ್ಮನ ಪ್ರೀತಿಯನ್ನು ಬಯಸುತ್ತಾನೆ.

(೫೫) ನೀ ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೆ, ಎನ್ನ ವಶವೇ ಅಯ್ಯ? ನೀನಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯಾ? ಅಕಟಕಟಾ, ಎನ್ನವನೆನ್ನವನೆನ್ನಯ್ಯಾ ಕೂಡಲಸಂಗಮದೇವಯ್ಯಾ.

ಭಾವಃ— ಎಲೋ ಪರಮಾತ್ಮನೇ, ನಿನ್ನ ಕೃಪೆಯಿಂದ ಮಾನವ ಜನ್ಮವನ್ನು ಎತ್ತಿದ್ದೇನೆ. ಆದ್ದರಿಂದ ನೀನು ಹುಟ್ಟಿಸಿದಲ್ಲಿ ಹುಟ್ಟಿ, ಸಾಯುತಕ್ಕಲ್ಲಿ ಸತ್ತು ಹೋಗಬೇಕೇ ಹೊರ್ತು ಹೆಚ್ಚಿನದನ್ನು ನಾನು ಆಶೆ ಮಾಡಬಾರದು. ಆದರೆ ಪರಮಾತ್ಮನೇ, ನಿನ್ನ ಕರುಣೆ ಮಾತ್ರ ನನ್ನ ಮೇಲಿರಲಿ.

(೫೬) ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ! ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ ! ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ.

ಭಾವಃ— ಪರಮಾತ್ಮನೇ, ನಾನು ನಿನ್ನಿಂದ ಬೇರೆಯವನೆಂದು ಭಾವಿಸಬೇಡ. ನಾನು ನಿನ್ನವನೆಂದು, ನಿನ್ನ ಮನೆಯ ಮಗನೆಂದು, ನನ್ನನ್ನು ಭಾವಿಸು, ಎಂದು ಬಸವೇಶ್ವರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ.

(೫೭) ಮುನಿದೆಯಾದೊಡೆ, ಒಮ್ಮೆ ಜರಿದಡೆ ಸಾಲದೇ? ಅಕಟಕಟಾ, ಮದನಂಗೆ ಮಾರುಗುಡುವರೆ? ಹಗೆಗೆ ಮಾರುಗೊಟ್ಟು, ನಿನ್ನ ಶರಣೊಪ್ಪಿಸುವರೇ ಕೂಡಲಸಂಗಮದೇವಾ?

ಮುನಿ = ಸಿಟ್ಟಾಗು; ಮಾರುಗುಡು = ಪ್ರತಿಯಾಗಿ ಕೊಡು, ಮಾರು.

ಭಾವಃ— ಬಸವೇಶ್ವರನು ತನ್ನ ದುರ್ಗುಣಗಳಿದ್ದದ್ದರ ಮೂಲಕ ಪರಮಾತ್ಮನು ತನ್ನಲ್ಲಿ ಪ್ರೀತಿಯುಳ್ಳವನಾಗಿಲ್ಲೆಂದು ತಿಳಿದು ಈ ವಚನವನ್ನು ನುಡಿದಿದ್ದಾನೆ. ಪರಮಾತ್ಮನಿಗೆ ಅವನು ಅನ್ನುವದೇನೆಂದರೆ, ನೀನು ನನ್ನಲ್ಲಿ ಸಿಟ್ಟುಳ್ಳವನಾದರೆ, ನನ್ನನ್ನು ಒಮ್ಮೆ ಬೈದು ಕೋಪ ಮಾಡಿ ಬಿಡು. ಇಷ್ಟೇ ಸಾಕು, ಎಂದು ಅವನು ಅಂದು, ಮುಂದೆ ಅಕಟಕಟಾ ಎಲೋ ಪರಮಾತ್ಮನೇ ನೀನು ಮದನನ ಕಯ್ಯಲ್ಲಿ ನನ್ನನ್ನು ಕೊಟ್ಟು ಬಿಡಬೇಕೇ? ಈ ಮದನನು ನಿನ್ನ ವೈರಿಯು, ನಾನು ನಿನ್ನ ಮೊರೆ ಹೊಕ್ಕವನು, ಇಂಥ ನಿನ್ನ ಸೇವಕನನ್ನು ನಿನ್ನ ವೈರಿಯ ಕಯ್ಯಲ್ಲಿ ಕೊಟ್ಟು ಬಿಡಬೇಕೇ, ಎಂದು ಬಸವೇಶ್ವರನು ಪರಮಾತ್ಮನಲ್ಲಿ ಕೋಪಿಸಿಕೊಳ್ಳುತ್ತಾನೆ.

(೫೮) ನರ ಕೊರಂಬಿನಲಿಚ್ಚವಂಗೊಲಿದೆಯಯ್ಯ. ಅರಳಂಬಿನ ಲೆಚ್ಚ ಕಾಮನನುರುಹಿದೆ. ಇರುಳು ಹಗಲೆನ್ನದೆ ಘಾತಕ ಮಾಡುವ ಬೇಡನ ಕೈಲಾಸಕ್ಕೊಯ್ದೆಯಯ್ಯಾ. ಎನ್ನನೇತಕ್ಕೊಲ್ಲ ಕೂಡಲಸಂಗಮದೇವಾ?

ನರ = ಅರ್ಜುನ; ಕೂರಂಬು = (ಕೂರ್+ಅಂಬು) ಹದನಾದ ಬಾಣ; ಅರಳಂಬು = (ಅರಳ್+ಅಂಬು) ಹೂವಿನ ಬಾಣ; ಉರುಹು = ಸುಡು.

ಭಾವಃ— ಬಸವೇಶ್ವರನು ಇನ್ನೊಂದು ರೀತಿಯಿಂದ ಪರಮಾತ್ಮನ ಪ್ರಾರ್ಥನೆ ಮಾಡುತ್ತಾನೆ. ಪರಮಾತ್ಮನನ್ನು ಹದನಾದ ಬಾಣ

ದೀಪ ಇರಿದ ಅರ್ಜುನನಲ್ಲಿ ಅವನು ಪ್ರೀತಿಯುಳ್ಳವನಾದನು. ಅವರಿ ಹೂವಿನ ಬಾಣದಿಂದ ಎಸೆದ ಕಾಮನನ್ನು ಅವನು ಸುಟ್ಟುಬಿಟ್ಟನು. ರಾತ್ರಿ ಹಗಲು ಎನ್ನದೆ ಹಿಂಸೆಯನ್ನು ಮಾಡುತ್ತಿದ್ದ ಬೇಡರ ಕಣ್ಣಪ್ಪ ನನ್ನು ಅವನು ಕೈಲಾಸಕ್ಕೊಯ್ದನು. ಅಂದಬಳಿಕ ಮೊರೆಹೊಕ್ಕಂಥ ನನ್ನನ್ನು ನೀನು ಏಕೆ ಸ್ವೀಕರಿಸಬಾರದು, ಎಂದು ಬಸವೇಶ್ವರನು ಪರಮಾತ್ಮನಲ್ಲಿ ಕೇಳಿಕೊಳ್ಳುತ್ತಾನೆ.

(೫೯) ಒಲೆ ಹತ್ತಿ ಉರಿದಡೆ, ನಿಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲಬಹುದೇ? ಏರಿ ನೀರುಂಬಡೆ, ಬೇಲಿ ಕೆಯಿ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ, ತಾಯಿ ಮೊಲೆವಾಲು ನಂಜಾಗಿ ಕೊಲುವಡೆ, ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ?

ಧರೆ = ಭೂಮಿ; ಏರಿ = ಒಡ್ಡು; ಕೆಯಿ = (ಕೆಯ್) ಹೊಲ; ಮೇವಡೆ = ಮೆಯ್ದರೆ, ತಿಂದರೆ; ಕಳುವಡೆ = ಕದ್ದರೆ; ಮೊಲೆವಾಲು = ಮೊಲೆಹಾಲು; ನಂಜು = ವಿಷ.

ಭಾವಃ— ಅಡಿಗೆಯ ಮನೆಯಲ್ಲಿಯ ಬೆಂಕಿಯು ಒಲೆಯಲ್ಲಿ ಮಾತ್ರ ಉರಿಯುತ್ತಿದೆ. ಆದ್ದರಿಂದ ನಾವು ಸುರಕ್ಷಿತವಾಗಿ ಮನೆಯಲ್ಲಿ ಆಡ್ಡಾಡುತ್ತೇವೆ. ಆದರೆ ಆ ಬೆಂಕಿಯು ಪೃಥ್ವಿಯನ್ನೇ ದಹಿಸತೊಡಗಿದರೆ, ಸುರಕ್ಷಿತವಾಗಿ ನಿಲ್ಲಲು ಸ್ಥಳವು ಹೇಗೆ ದೊರಕೀತು? ಒಂದು ವೇಳೆ ಕೆರೆಯ ಒಡ್ಡು ಕೆರೆಯ ನೀರನ್ನು ಸುರಕ್ಷಿತವಾಗಿ ಹಿಡಿದು ನಿಲ್ಲಿಸದೆ, ಆ ನೀರನ್ನು ತಾನೇ ಕುಡಿಯಹತ್ತಿದರೆ, ಅಥವಾ ಹೊಲದ ಸುತ್ತಲೂ ಹಾಕಿದ ಬೇಲಿಯು ಹೊಲವನ್ನೇ ಮೇಯಹತ್ತಿದರೆ, ಅಥವಾ ಸ್ತ್ರೀಯಳು ತನ್ನ ಮನೆಯಲ್ಲಿರುವ ಜಿನಸುಗಳನ್ನು ತಾನೇ ಕಳವು ಮಾಡಹತ್ತಿದರೆ, ಅಥವಾ ತಾಯಿಯು ತನ್ನ ಮಗುವಿಗೆ ಮೊಲೆ ಕುಡಿಸುವದನ್ನು ಬಿಟ್ಟು, ಅದಕ್ಕೆ ವಿಷ ಹಾಕಿದರೆ, ಯಾರಿಗೆ ದೂರಬೇಕು? ಹಾಗೆಯೇ ಪರಮಾತ್ಮನು ನನ್ನನ್ನು ರಕ್ಷಿಸದೆ ಹೋದರೆ, ನಾನು ಮೊರೆ ಹೊಗುವವರನ್ನು ಆರನ್ನೂ ಕಾಣೆನೆಂದು ಬಸವೇಶ್ವರನು ಪರಮಾತ್ಮನ ರಕ್ಷಣೆಯನ್ನು ಬೇಡಿಕೊಳ್ಳುತ್ತಾನೆ.

(೬೦) ಎನ್ನ ಕಾಯವ ದಂಡಿಗೆಯ ಮಾಡಯ್ಯಾ! ಎನ್ನ ಶಿರವ ಸೋರೆಯ ಮಾಡಯ್ಯಾ! ಎನ್ನ ನರವ ತಂತಿಯ ಮಾಡಯ್ಯಾ! ಎನ್ನ ಬೆರಳ ಕಡ್ಡಿಯ ಮಾಡಯ್ಯಾ! ಬತ್ತೀಸ ರಾಗವ ಹಾಡಯ್ಯಾ! ಉರದ ಲೊತ್ತಿ ಬಾರಿಸು ಕೂಡಲಸಂಗಮದೇವಾ.

ದಂಡಿಗೆ = ತಂಬೂರಿಯ ಮಧ್ಯಕೋಲು; ಸೋರೆ = ಬುರುಡಿ; ಉರ = ಹೃದಯ, ಎದೆ.

ಭಾವಃ— ಈ ವಚನದಲ್ಲಿ ಪರಮಾತ್ಮನು ತನ್ನ ಉಚ್ಚತಮ ಸ್ಥಿತಿಯನ್ನು ತನ್ನಲ್ಲುಂಟು ಮಾಡಬೇಕೆಂದು ಬಸವೇಶ್ವರನು ಅವನನ್ನು ಬೇಡಿಕೊಳ್ಳುತ್ತಾನೆ. ಇದರಲ್ಲಿ ಅವನು ತಂಬೂರಿಯನ್ನು ನುಡಿಸುವವನ ಉದಾಹರಣೆಯನ್ನು ಕೊಟ್ಟಿದ್ದಾನೆ. ತಂಬೂರಿ ನುಡಿಸುವವನು ತನ್ನಲ್ಲುಂಟಾದ ಭಾವಗಳನ್ನು ಅನೇಕ ರಾಗಗಳ ಮೂಲಕ ಅದರಲ್ಲಿ ಹೊರಡಿಸುತ್ತಾನೆ. ಹಾಗೆಯೇ ಮನುಷ್ಯನು ತನ್ನ ಶಿರವೆಂದರೆ ತಂಬೂರಿ ಎಂದು ತಿಳಿಯಬೇಕು. ತನ್ನ ಶರೀರವೆಂದರೆ ಅದರ ಸೋರೆಯಕಾಯಿ, ತನ್ನ ನರಗಳೆಂದರೆ ತಂತಿಗಳು, ತನ್ನ ಬೆರಳುಗಳೆಂದರೆ ಬಾರಿಸುವ ಕಡ್ಡಿಗಳು, ಎಂದು ಭಾವಿಸಿ ಇಂಥ ತಂಬೂರಿಯನ್ನು ಪರಮಾತ್ಮನು ತನ್ನ ಹೃದಯದಲ್ಲಿಟ್ಟುಕೊಂಡು, ೩೨ ರಾಗಗಳನ್ನು ಹಾಡಿ, ನನ್ನನ್ನು ಬಾರಿಸು ಎಂದು ಬಸವೇಶ್ವರನು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತಾನೆ.

(೬೧) ಕಾಳಿದಾಸಂಗೆ ಕಣ್ಣನಿತ್ತೆ. ಓಹಿಲಯ್ಯನ ನಿಜಪುರಕೊಯ್ದೆ. ನಂಬಿ ಕರೆದಡೋ ಎಂದೆ. ತೆಲುಗು ಜೊಮ್ಮಯ್ಯಂಗೆ ಒಲಿದೆ ದೇವಾ! ಕೂಡಲಸಂಗಮದೇವಾ ಎನ್ನನೇಕೊಲ್ಲೆಯಯ್ಯಾ?

ಭಾವಃ— ಕಾಳಿದಾಸನಿಗೆ ಕಣ್ಣನ್ನು ಕೊಟ್ಟೆ. ಓಹಿಲನನ್ನು ಕೈಲಾಸಕ್ಕೊಯ್ದೆ. ನಂಬಿಯಕ್ಕನು ಕರೆದರೆ 'ಓ' ಎಂದೆ. ತೆಲುಗು ಜೊಮ್ಮಯ್ಯನಿಗೆ ಒಲಿದೆ. ಹೇಗೆ ನೀನು ಅವರಿಗೆ ಒಲಿದು ಶ್ರೇಷ್ಠ ಪದವಿಯನ್ನು ಕೊಟ್ಟೆಯೋ ಹಾಗೆಯೇ ನೀನು ನನಗೆ ಒಲಿ ಎಂದು ಬೇಡಿಕೊಳ್ಳುತ್ತಾನೆ.

(೬೨) ಪರುಷದ ಹೊರೆಯಲ್ಲಿ ಕಬ್ಬುನವಿದ್ದು ಹೊನ್ನಾಯಿತ್ತು ನೋಡಿರೇ. ಅನ್ನೆ ಚಂಗಳೆ, ನೀನಿದ್ದೇಳು ಕೇರಿಯವರು ಲಿಂಗದ ನೋಂಪಿಯ ನೋಂತರೇ ಹೇಳಾ? ಕೂಡಲಸಂಗಮದೇವಂಗೆ ಚಿಲಾಳನೆಂಬ ಬಾಯಿನವನಿಕ್ಕಿದರೇ ಹೇಳಾ?

ಹೊರೆ = ಸಮೀಪ; ಕೇರಿ = ಓಣಿ; ನೋಂಪಿ = ವ್ರತ; ನೋಂತರೇ = ವ್ರತವನ್ನು ಕೈಕೊಂಡರೇ? ಬಾಯಿನ = ಇನಾಮು, ನೈವೇದ್ಯ; ಇಕ್ಕು = ಕೊಡು.

ಭಾವಃ— ಪರುಷದ ಸಮೀಪದಲ್ಲಿ ಕಬ್ಬಿಣವನ್ನು ಇಟ್ಟರೆ, ಆ ಕಬ್ಬಿಣವು ಬಂಗಾರವಾಗುತ್ತದೆ. ಚಂಗಳವ್ವೆಯು ಪರಮಾತ್ಮನಿಗೋಸ್ಕರ ಭಕ್ತಿಯನ್ನು ಮಾಡುತ್ತಿರಲು ಆಕೆಯ ಮನೆಯ ಹತ್ತರಿದ್ದ ಎಳು ಕೇರಿಯವರೆಲ್ಲರೂ ಅವಳೊಡನೆ ಕೈಲಾಸಕ್ಕೆ ಹೋದರು. ಚಂಗಳವ್ವೆಯು ಚಿಲ್ಲಾಳನೆಂಬ ತನ್ನ ಮಗನನ್ನು ಪರಮಾತ್ಮನಿಗೆ ಹೇಗೆ ಅರ್ಪಿಸಿದಳೋ ಹಾಗೆ ಈ ಕೇರಿಯವರಾರೂ ತಮ್ಮ ಮಕ್ಕಳನ್ನು ಅವನಿಗೆ ಅರ್ಪಿಸಿದರೋ? ಇಂಥವರಿಗೆ ನೀನು ಹೇಗೆ ಉಚ್ಚಪದವಿಯನ್ನು ಕೊಟ್ಟೆಯೋ ಹಾಗೆಯೇ ನನ್ನ ಭಕ್ತಿಯು ಪೂರ್ಣವಾಗಿರದಿದ್ದರೂ ನನಗೆ ಶ್ರೇಷ್ಠ ಪದವಿಯನ್ನು ಕೊಡು, ಎಂದು ಬಸವೇಶ್ವರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ. ನನ್ನ ತಪ್ಪುಗಳನ್ನು ನೋಡಬೇಡ ಎಂದು ಹೇಳುವದೇ ಅವನ ಭಾವವು.

(೬೩) ಮುನ್ನ ಮಾಡಿದ ಪಾಪ ಬೆನ್ನಬಿಡದನ್ನಕ್ಕ, ಇನ್ನು ಬಯಸಿದರುಂಟೇ? ಭಕ್ತಿಯುಳ್ಳವರ ನೋಡಿ ನೋಡಿ ಬಯಸಿದರುಂಟೇ, ಕೂಡಲಸಂಗಮದೇವರಲ್ಲಿ ಮುನ್ನ ವರವ ಪಡೆಯದನ್ನಕ್ಕ?

ಭಾವಃ— ಹಿಂದೆ ನಾನು ಮಾಡಿದ ಪಾಪದ ಪರಿಣಾಮಗಳನ್ನು ನಾನು ಅನುಭವಿಸದ ಹೊರ್ತು ಹೆಚ್ಚಿನ ಪದವಿಯನ್ನು ಬೇಡಿದರೆ ಅದು ನನಗೆ ಹೇಗೆ ದೊರಕೀತು? ನಾನು ಭಕ್ತಿ ಇದ್ದವರನ್ನು ಬರೀ ನೋಡಿ ಅವರಂತೆ ನಾನಾಗಬೇಕೆಂದು ಬಯಸುತ್ತೇನೆ. ಹೀಗೆ ಬಯಸಿದರೆ ಶ್ರೇಷ್ಠ ಪದವಿಯು ಹೇಗೆ ಸಾಧ್ಯವಾದೀತು? ನನ್ನಲ್ಲಿ ಪರಮಾತ್ಮನ ಕರುಣವು ಉಂಟಾಗಿ ಅವನಿಂದ ವರವನ್ನು ಪಡೆಯದ ಹೊರ್ತು ಇದು ಸಾಧ್ಯವಾಗಲಾರದು.

(೬೪) ಏನನಾದರೆಯೂ ಸಾಧಿಸಬಹುದು. ಮತ್ತೇನನಾದರೆಯೂ ಸಾಧಿಸಬಹುದಯ್ಯ. ತಾನಾರೆಂಬುದ ಸಾಧಿಸಬಾರದಯ್ಯ ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ.

ಭಾವಃ— ನಾನು ಬೇಕಾದದ್ದನ್ನು ಸಾಧಿಸಬಹುದು. ಅಶಕ್ಯವೆಂದು ತೋರಿದ್ದನ್ನು ಸಹ ಸಾಧಿಸಬಹುದು. ಆದರೆ ಆತ್ಮಜ್ಞಾನವನ್ನು ಪಡೆಯುವದು ಮಾತ್ರ ಕಷ್ಟವು. ಅದು ಪರಮಾತ್ಮನ ಕರುಣವಿಲ್ಲದೆ ಸಾಧ್ಯವಾಗಲಾರದು. ಆದ್ದರಿಂದ ಇದರಲ್ಲಿ ಪರಮಾತ್ಮನ ಕರುಣೆಯನ್ನೇ ಪ್ರಾರ್ಥಿಸಬೇಕೆಂದು ಬಸವೇಶ್ವರನು ಹೇಳಿಕೊಳ್ಳುತ್ತಾನೆ.

(೬೫) ಮಾಡುವಾತ ನಾನಲ್ಲಯ್ಯ, ನೀಡುವಾತ ನಾನಲ್ಲಯ್ಯ, ಬೇಡುವಾತ ನಾನಲ್ಲಯ್ಯ ನಿಮ್ಮ ಕಾರುಣ್ಯವಲ್ಲದೆ. ಎಲೆ ದೇವಾ, ಮನೆಯ ತೊತ್ತಲಸಿದರೆ ಒಡತಿ ಮಾಡಿಕೊಂಬಂತೆ, ನಿನಗೆ ನೀ ಮಾಡಿಕೋ ಕೂಡಲಸಂಗಮದೇವಾ.

ಅಲಸು = ಆಲಸ್ಯಮಾಡು; ಒಡತಿ = ಯಜಮಾನಿತಿ.

ಭಾವಃ— ಪರಮಾತ್ಮನಿಗೋಸ್ಕರ ಭಕ್ತಿಯನ್ನು ಮಾಡುವಾತ ನಾನಲ್ಲ. ಪರಮಾತ್ಮನಿಗೋಸ್ಕರ ಕೊಡುವಾತನೂ ನಾನಲ್ಲ. ಶ್ರೇಷ್ಠ ಪದವಿಯನ್ನು ಅಪೇಕ್ಷೆ ಮಾಡಿ ಅದನ್ನು ಬೇಡುವಾತನೂ ನಾನಲ್ಲ. ಈ ಎಲ್ಲ ಭಾವಗಳು ನನ್ನಲ್ಲಿ ಉಂಟಾಗಬೇಕಾದರೆ ಇದಕ್ಕೆ ಪರಮಾತ್ಮನ ಕಾರುಣ್ಯ ಬೇಕು. ಎಲೋ ಪರಮಾತ್ಮನೇ, ಮನೆಯ ತೊತ್ತು ಮನೆಗೆಲಸ ಮಾಡುವದು ಆಕೆಯ ಕರ್ತವ್ಯವೆಂಬುದು ಸರಿ. ಆದರೆ ಅವಳಿಗೆ ಆಲಸ್ಯವು ಬಂದ ಕಾಲದಲ್ಲಿ ಮನೆಯ ಯಜಮಾನಿತಿ ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳುತ್ತಾಳೆ. ಯಾಕಂದರೆ ಆ ಕೆಲಸವು ಆಕೆಯದಾಗಿರುತ್ತದೆ. ಅದೇ ಮೇರೆಗೆ ಎಲೋ ಪರಮಾತ್ಮನೇ, ನನ್ನ ಭಕ್ತಿಯಲ್ಲಿ ಏನಾದರೂ ಚ್ಯುತಿಯುಂಟಾದರೆ ಅದನ್ನು ನೀನು ಸೈರಿಸಿಕೊಂಡು ನನಗೆ ಶ್ರೇಷ್ಠ ಪದವಿಯನ್ನು ಕೊಡು, ಎಂದು ಬಸವೇಶ್ವರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ.

ಪರಮಾತ್ಮನ ರಕ್ಷಣೆಯನ್ನು ಬೇಡು.

(೬೬) ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು. ನೀನಲ್ಲದೆ ಮತ್ತಾರೂ ಇಲ್ಲವಯ್ಯಾ. ಕೂಡಲಸಂಗಮದೇವಾ, ಹಾಲಲದ್ದು, ನೀರಲದ್ದು.

ಅದ್ದು = ಎದ್ದು, ಮುಳುಗಿಸು.

ಭಾವಃ—ಎಲೋ ಪರಮಾತ್ಮನೇ, ನೀನೇ ನನ್ನ ತಂದೆತಾಯಿಯು. ಅವರಂತೆ ನೀನು ನನ್ನನ್ನು ಕಾಯುತ್ತಿರುವಿ. ನೀನೇ ನನ್ನ ಬಂಧುಬಳಗ. ಅವರಂತೆಯೇ ನೀನು ನನಗೆ ಹಿತಸ್ತನು. ನೀನಲ್ಲದೆ ನನಗೆ ಮತ್ತಾರೂ ಇಲ್ಲ. ಎಲೋ ಪರಮಾತ್ಮನೇ, ನಿನಗೆ ಬೇಕಾದರೆ, ನೀನು ನನ್ನನ್ನು

ನೀರಿನಲ್ಲಿ ಹಾಕು ಅಥವಾ ಹಾಲಿನಲ್ಲಿ ಉಣಿಸು. ನೀನು ಏನು ಮಾಡಿದರೂ ನಾನು ನಿನ್ನನ್ನೇ ಮೊರೆಹೊಗುತ್ತೇನೆ.

(೬೭) ಆನು ಒಬ್ಬನು, ಸುಡುವರೈವರು. ಮೇಲೆ ಕಿಚ್ಚು ಘನ. ನಿಲಲು ಬಾರದು. ಕಾಡಬಸವನ ಹುಲಿ ಕೊಂಡೊಯ್ದರೆ, ಅರೈಯ್ಯಲಾಗದೇ ಕೂಡಲಸಂಗಮದೇವಾ?

ಅರೈಯ್ಯಲಾಗದೇ = ಕಾಪಾಡಲಾಗದೇ ?

ಭಾವಃ— ನಾನು ಏಕಾಕಿಯಾಗಿದ್ದೇನೆ. ಆದರೆ ಐದು ಅಗ್ನಿಗಳು ನನ್ನನ್ನು ಸುಡಲು ಸಿದ್ಧವಾಗಿವೆ. ಅವು ಉದರಾಗ್ನಿ, ಮಂದಾಗ್ನಿ, ಕಾಮಾಗ್ನಿ, ಶೋಕಾಗ್ನಿ, ವಡಬಾಗ್ನಿ ಎಂದಿವೆ. ಅವು ಅನುಕ್ರಮವಾಗಿ ಹಸಿವೆಯಾಗುವದು, ಹಸಿವೆಯಾಗದಿರುವದು, ಸ್ತ್ರೀವ್ಯಾಮೋಹ, ಸಂಸಾರ ದುಃಖ, ಜಗತ್ತನ್ನು ಸಂಹಾರಮಾಡತಕ್ಕ ವಡಬಾಗ್ನಿ ಇವು ಇವೆ. ಇವುಗಳಿಂದ ನಾನು ನಾಶವಾಗುವೆನೆಂಬ ದೊಡ್ಡ ಚಿಂತೆಯು ನನ್ನನ್ನು ಆವರಿಸಿದೆ. ಅವು ನನ್ನನ್ನು ಸಮಾಧಾನದಿಂದಿರಗೊಡುವದಿಲ್ಲ. ಎಲೋ ಪರಮಾತ್ಮನೇ, ಅಡವಿಬಿದ್ದ ದನವನ್ನು ಹುಲಿಯು ಹಿಡಿದುಕೊಂಡು ಹೋದರೆ, ಅದನ್ನು ನೀನು ಕಾಯಬಾರದೇ? ಅದನ್ನು ಕಾಯುವದು ಹೇಗೆ ನಿನ್ನ ಕರ್ತವ್ಯವೋ, ಹಾಗೆ ನನ್ನನ್ನು ಕಾಯುವದು ನಿನ್ನ ಕರ್ತವ್ಯವು.

(೬೮) ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ! ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ! ಕರ್ತೃವೇ ಕೂಡಲಸಂಗಮದೇವಾ, ಇದ ತಪ್ಪಿಸಿ ಎನ್ನುವ ರಕ್ಷಿಸಯ್ಯಾ.

ನೆಳಲು = ನೆರಳು, ಆಶ್ರಯ; ಇಪ್ಪಂತೆ = ಇರುವಂತೆ; ವೃಥಾ = ವ್ಯರ್ಥವಾಗಿ.

ಭಾವಃ— ನಾನು ಈ ಜಗತ್ತಿನಲ್ಲಿ ಇರುವದೆಂದರೆ ಕಪ್ಪೆಯು ಸರ್ಪನ ರಕ್ಷಣೆಯಲ್ಲಿದ್ದಂತಾಗಿದೆ. ಅಯ್ಯೋ, ಅಯ್ಯೋ, ಈ ಸಂಸಾರವು ವ್ಯರ್ಥವಾಗಿ ಹೋಯಿತ್ತಲ್ಲಾ ಎಂದು ಬಸವೇಶ್ವರನು ದುಃಖಪಡುತ್ತ, ಎಲೋ ಪರಮಾತ್ಮನೇ ಈ ನನ್ನ ದುರವಸ್ಥೆಯನ್ನು ತಪ್ಪಿಸಿ ನನ್ನನ್ನು ರಕ್ಷಿಸು, ಎಂದು ಅವನನ್ನು ಬೇಡಿಕೊಳ್ಳುತ್ತಾನೆ.

(೬೯) ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ! ಚಂದ್ರ ಕುಂದೆ, ಕುಂದುವುದಯ್ಯಾ! ಚಂದ್ರಂಗೆ ರಾಹು ಅಡ್ಡ ಬಂದಲ್ಲಿ, ಅಂಬುಧಿ ಬೊಬ್ಬಿಟ್ಟತ್ತೆ? ಅಂಬುಧಿಯ ಮುನಿ ಅಪೋಷಣವ ಕೊಂಬಲ್ಲಿ ಚಂದ್ರಮನಡ್ಡ ಬಂದನೇ? ಆರಿಗಾರು ಇಲ್ಲ. ಕೆಟ್ಟವಂಗೆ ಕೆಳೆ ಇಲ್ಲ. ಜಗದ ನಂಟ ನೀನೇ ಅಯ್ಯಾ ಕೂಡಲಸಂಗಮದೇವ?

ಅಂಬುಧಿ = ಸಮುದ್ರ; ಹೆಚ್ಚು = ಉಕ್ಕೇರು; ಆಪೋಷಣ = ನೀರು ಸೀಪು, ಕುಡಿ; ಕೆಟ್ಟವಂಗೆ = ಕಷ್ಟದಲ್ಲಿದ್ದವನಿಗೆ; ಕೆಳೆ = ಗೆಳೆಯ, ಮಿತ್ರ; ನಂಟ = ಆಪ್ತ.

ಭಾವಃ— ಚಂದ್ರೋದಯವಾಗಲು ಸಮುದ್ರವು ಉಕ್ಕೇರುತ್ತದೆ. ಚಂದ್ರನು ಮುಳುಗಲು ಸಮುದ್ರವೂ ಕೆಳಗಿಳಿಯುತ್ತದೆ. ಹೀಗೆ ಅವರಲ್ಲಿ ಪರಸ್ಪರ ಸ್ನೇಹವಿದ್ದಂತೆ ಭಾಸವಾಗುತ್ತದೆ. ಆದರೆ ಚಂದ್ರನಿಗೆ ರಾಹು ಬಂದು ನುಂಗುತ್ತಿರಲು ಅವನನ್ನು ಕಾಯುವದಕ್ಕೆ ಸಮುದ್ರವು ಹಾತೊರೆಯುತ್ತದೆಯೋ, ಹೇಗೆ? ಅದು ಆಗ ಏನೂ ಮಾಡದೆ ಮೊದಲಿನಂತೆಯೇ ಇರುತ್ತದೆ. ಹಾಗೆಯೇ ಅಗಸ್ತ್ಯಮುನಿಯು ಸಮುದ್ರವನ್ನು ಕುಡಿಯುವ ಕಾಲದಲ್ಲಿ, ಅದನ್ನು ಉಳಿಸಲಿಕ್ಕೆ ಚಂದ್ರಮನು ಮುಂದೆ ಬಂದನೇ ಹೇಗೆ? ಆಗ ಚಂದ್ರಮನು ಮುಂದೆ ಬರಲಿಲ್ಲ. ಹೀಗೆ ಸಮುದ್ರ ಮತ್ತು ಚಂದ್ರಮ ಇವರ ಸ್ನೇಹದಲ್ಲಿ ಏನೂ ಹುರುಳಿಲ್ಲ. ಜಗತ್ತಿನಲ್ಲಿ ಯಾರಿಗಾರೂ ಇಲ್ಲ. ಕಷ್ಟಬಂದವರಿಗೆ ಸ್ನೇಹಿತರಾರೂ ಇಲ್ಲ. ಎಲೋ ಪರಮಾತ್ಮನೇ ಜಗತ್ತಿನ ನಿಜವಾದ ಸ್ನೇಹಿತನು ನೀನೇ, ಎಂದು ಬಸವೇಶ್ವರನು ಅವನಲ್ಲಿ ಹೇಳಿಕೊಳ್ಳುತ್ತಾನೆ.

(೭೦) ಹರಿಯಜ ಮನುಮುನಿಗಳೆಲ್ಲರು ನಿಮ್ಮ ಬಾಗಿಲ ಕಾಯ್ದಿಪ್ಪರು. ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ? ಡಿಂಗರಿಗನ ಮನೆಗೆ ಅಂಗಜಾಹವಕ್ಕೆ ಹೋಗಿ ಇದ್ದವರೊಳರೇ ಕೂಡಲಸಂಗಮದೇವ?

ಹರಿ = ವಿಷ್ಣು; ಅಜ = ಬ್ರಹ್ಮ; ಕಾಯ್ದಿಪ್ಪರು = ಕಾಯುತ್ತಿರುವರು; ಡಿಂಗರಿಗ = ಸೇವಕ; ಅಂಗಜ = ಕಾಮ; ಆಹವ = ಕಾಳಗ; ಇದ್ದವರೊಳರೇ = ಇದ್ದವರು ಶಕ್ಯವೇ.

ಭಾವಃ— ವಿಷ್ಣು ಬ್ರಹ್ಮ ಮನು ಮುನಿಗಳು ಪರಮಾತ್ಮನ ಬಾಗಿಲ ಕಾಯುತ್ತ ಇರುತ್ತಾರೆ. ಅಂದಮೇಲೆ ಎಲೋ ಪರಮಾತ್ಮನೇ ನೀನು ಬಾಣಾಸುರನ ಮನೆಯ ಬಾಗಿಲನ್ನು ಏನು ಕಾರಣ ಕಾಯ

ಲಿಕ್ಕೆ ಹೋದಿ? ಬಾಣಾಸುರನು ನಿನ್ನ ಸೇವಕನು. ಅವನು ಒಬ್ಬ ಸ್ತ್ರೀಯಳ ಸಲುವಾಗಿ ಯುದ್ಧ ಮಾಡಿದನು. ಇಂಥವನ ಸೇವೆ ನೀನು ಮಾಡುವದುಂಟೇ? ಅಂಥವನಿಗೋಸ್ಕರ ನೀನು ಮುಂದುವರಿದ ಬಳಿಕ ನನಗೇಕೆ ನೀನು ಒಲಿಯಲಾರೆ, ಎಂದು ಪ್ರಶ್ನೆ ಮಾಡುತ್ತಾನೆ.

ಪರಮಾತ್ಮನ ಕ್ಷಮೆಯನ್ನು ಬೇಡು.

(೨೧) ಎನ್ನ ತಪ್ಪು ಅನಂತ ಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದರೆ, ನಿಮ್ಮ ಪಾದವೇ ದಿಬ್ಯ. ಕೂಡಲಸಂಗಮದೇವಯ್ಯ ನಿಮ್ಮ ಪ್ರಮಥರ ಮುಂದೆ ಕಿನ್ನರೀ ಬೊಮ್ಮಣ್ಣನೇ ಸಾಕ್ಷಿ.

ದಿಬ್ಯ = ದಿವ್ಯ, ಉತ್ತಮಸ್ಥಿತಿಗೆ ಒಯ್ಯುವಂಥ.

ಭಾವಃ— ಪರಮಾತ್ಮನೇ, ನಾನು ದಿನಾಲು ಅಸಂಖ್ಯ ತಪ್ಪುಗಳನ್ನು ಮಾಡುತ್ತೇನೆ. ನಿನ್ನ ತಾಳ್ಮೆಗೆ ಲೆಕ್ಕವಿಲ್ಲ. ಆದರೆ ಇನ್ನು ಮುಂದೆ ನಾನು ತಪ್ಪುವದಿಲ್ಲೆಂದು ನಿಶ್ಚಯವಾಗಿ ಹೇಳುತ್ತೇನೆ. ಒಂದು ವೇಳೆ ನಾನು ತಪ್ಪಿದಲ್ಲಿ ನನ್ನನ್ನು ಉದ್ಧಾರಮಾಡಿ ಶ್ರೇಷ್ಠಸ್ಥಿತಿಗೆ ತರುವವನು ನೀನೇ. ಆದರೂ ಇನ್ನು ಮೇಲೆ ನಾನು ತಪ್ಪು ಮಾಡುವದಿಲ್ಲೆಂಬುದಕ್ಕೆ ಶಿವಶರಣನಾದ ಕಿನ್ನರೀಬ್ರಹ್ಮಯ್ಯನೇ ನನ್ನ ಸಾಕ್ಷಿಯು.

(೨೨) ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯ! ಒಮ್ಮಿಂಗೆ ಕರುಣಿಸಯ್ಯ! ಒಮ್ಮಿಂಗೆ ಕರುಣಿಸಯ್ಯ! ಇದನರಿದು ಇನ್ನು ತಪ್ಪಿದೆನಾದರೆ, ನೀವು ಮಾಡಿತ್ತೆ ಸಲುವುದು ಕೂಡಲಸಂಗಮದೇವಾ.

ಭಾವಃ— ನಾನು ಸರಿಯಾದ ಆಚರಣೆಯಲ್ಲಿದ್ದು ಇಷ್ಟ, ಪ್ರಾಣ, ಭಾವಲಿಂಗಗಳನ್ನು ಒಳಕೊಂಡು ಲಿಂಗಾಂಗಸಾಮರಸ್ಯವನ್ನು ಹೊಂದಬೇಕು. ಆದರೆ ನಾನು ಹಾಗೆ ಆಚರಿಸದೆ ತಪ್ಪು ಮಾರ್ಗವನ್ನು ಹಿಡಿಯುತ್ತೇನೆ. ಎಲೋ ಪರಮಾತ್ಮನೇ, ನೀನು ನನಗೆ ಒಮ್ಮೆಯಾದರೂ ಕರುಣಿಸು. ನೀನು ಕರುಣಿಸಿದಿ ಎಂಬುದನ್ನು ತಿಳಿದ ಬಳಿಕ ಇನ್ನು ಮೇಲೆ ನಾನು ಪುನಃ ತಪ್ಪು ಮಾಡುವದಿಲ್ಲ. ಆದರೂ ಒಂದು ವೇಳೆ ತಪ್ಪು ಮಾಡಿದೆನಾದರೆ, ನೀನು ಮಾಡಿದ ಶಿಕ್ಷೆಯನ್ನು ನಾನು ಅಂಗೀಕರಿಸು

ತ್ತೇನೆ. ಸರಿಯಾಗಿ ಆಚರಿಸುವೆನೆಂಬ ದೃಢವಾದ ನಿಶ್ಚಯವು ನನ್ನಲ್ಲಿದೆ ಎಂದು ಹೇಳುವದೇ ಬಸವೇಶ್ವರನ ಮುಖ್ಯ ಅಭಿಪ್ರಾಯವು.

(೨೩) ಮೇರು ಗುಣವನರಸುವುದೇ ಕಾಗೆಯಲ್ಲಿ? ಪರುಷ ಗುಣವನರಸುವುದೇ ಕಬ್ಬುನದಲ್ಲಿ? ಸಾದು ಗುಣವನರಸುವುದೇ ಅವಗುಣಿಯಲ್ಲಿ? ಚಂದನ ಗುಣವನರಸುವುದೇ ತರುಗಳಲ್ಲಿ? ಸರ್ವಗುಣಸಂಪನ್ನಲಿಂಗವೇ, ನೀನೆನ್ನಲ್ಲಿ ಅವಗುಣವನರಸುವರೇ ಕೂಡಲಸಂಗಮದೇವಾ?

ಸಾದು = ಪರಮಳ, ಸುಗಂಧ ದ್ರವ್ಯ.

ಭಾವಃ— ನನ್ನಲ್ಲಿ ಯಾವಾಗಲೂ ತಪ್ಪುಗಳಾಗುತ್ತವೆ. ಈ ವಿಚಾರವು ಬಸವೇಶ್ವರನಲ್ಲಿ ಬಂದು, ಅವನು ಪರಮಾತ್ಮನಲ್ಲಿ ಬೇಡಿಕೊಳ್ಳುವದೇನಂದರೆ, ಪರಮಾತ್ಮನೇ ನೀನು ನನ್ನ ತಪ್ಪುಗಳನ್ನು ನೋಡಬೇಡ. ನನ್ನನ್ನು ಕ್ಷಮಿಸು. ಮೇರು ಪರ್ವತವು ಕಾಗೆಯಂಥ ಕ್ಷುದ್ರ ಪಕ್ಷಿಯು ತನ್ನಲ್ಲಿ ಬಂದಕೂಡಲೆ ಅದನ್ನು ಹೇಗೆ ಹೊಂಬಣ್ಣವಾಗಿ ಮಾಡುತ್ತದೆಯೋ, ಪರುಷವು ಕಬ್ಬಿಣವು ತನ್ನನ್ನು ಮುಟ್ಟಿದಕೂಡಲೆ ಅದನ್ನು ಹೇಗೆ ಬಂಗಾರವನ್ನಾಗಿ ಮಾಡುತ್ತದೆಯೋ, ಸುಗಂಧ ದ್ರವ್ಯವು ತನ್ನನ್ನು ಹಚ್ಚಿಕೊಂಡವರು ಎಂಥವರಿದ್ದರೂ ಕೂಡ ಅವರಲ್ಲಿ ತನ್ನ ಸುಗಂಧವನ್ನೇ ಹೇಗೆ ಬೀರುತ್ತದೆಯೋ, ಶ್ರೀಗಂಧದ ಗಿಡವು ತನ್ನ ಸಮೀಪದಲ್ಲಿದ್ದ ಗಿಡಗಳಲ್ಲೆಲ್ಲ ಸುಗಂಧವು ಹೊರಸೂಸುವಂತೆ ಹೇಗೆ ಮಾಡುತ್ತದೆಯೋ, ಹಾಗೆ ಎಲೋ ಪರಮಾತ್ಮನೇ, ನೀನು ನನ್ನ ಕೆಟ್ಟ ಗುಣಗಳನ್ನು ಲಕ್ಷಿಸದೆ ನಾನು ನಿನ್ನಲ್ಲಿ ಬೆರೆಯುವಂಥ ಸ್ಥಿತಿಯನ್ನು ದಯಪಾಲಿಸು ಎಂದು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ.

(೨೪) ಮೂಗ ಕಂಡ ಕನಸಿನಂತಾಯಿತ್ತಯ್ಯ ಎನ್ನ ಭಕ್ತಿ. ಗುಣವ ಹೇಳಬಾರದಾರಿಗೆಯೂ. ಕೇಳಲೆಂತೂ ಬಾರದು. ಎನ್ನ ಎಗ್ಗತನವ ಮಾಣಿಸು ಕೂಡಲಸಂಗಮದೇವಾ.

ಮೂಗ = ಮೂಕ; ಎಗ್ಗತನ = ಹೆಡ್ಡತನ, ದಡ್ಡತನ; ಮಾಣಿಸು = ಬಿಡಿಸು.

ಭಾವಃ — ಬಸವೇಶ್ವರನ ಮನಸ್ಸಿನಲ್ಲಿ ನಾನೊಬ್ಬ ಎಗ್ಗನು, ಅಂದರೆ ದಡ್ಡನು ಎಂಬ ವಿಚಾರವು ಬರುತ್ತದೆ. ಆಗ ಅವನು ಅನ್ನುವದೇನಂದರೆ,

ನನ್ನ ಭಕ್ತಿಯು ಯಾವ ತರಹದ್ದಿದೆ ಎಂಬುವದನ್ನು ಹೇಳಲಿಕ್ಕೆ ನನಗೆ ಬರುವದಿಲ್ಲ. ಮೂಕನು ತಾನು ಕಂಡ ಕನಸನ್ನು ಹೇಳಲಿಕ್ಕೆ ಅವನಿಗೆ ಹೇಗೆ ಬರಲಾರದೋ ಹಾಗೆ ನನಗೆ ಈಗ ಆಗಿದೆ. ಅದರಿಂದ ಆ ಕನಸು ನಿಮಗೂ ತಿಳಿಯದು ನನಗೂ ತಿಳಿಯದು. ಆದ್ದರಿಂದ ಈ ನನ್ನ ಮೂಢಸ್ಥಿತಿಯನ್ನು ಹೋಗಲಾಡಿಸಿ, ನಾನು ಜ್ಞಾನಿಯಾಗುವಂತೆ ಮಾಡು, ಎಂದು ಬಸವೇಶ್ವರನು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತಾನೆ.

(೭೫) ಹುಟ್ಟಿಂದು ಲೋಕದಲ್ಲಿ ಹುಟ್ಟಿಸಿ ಇಳಿಯ ಬಿಟ್ಟರೆ, ನಿಮ್ಮ ನಗುವರಯ್ಯಾ. ಶಿವ ಬಟ್ಟೆಯಲೆನ್ನನು ಇರಿಸಯ್ಯಾ. ಹರನೇ, ಹೊಲಬುಗೆಟ್ಟೆನು. ಬಟ್ಟೆಯ ತೋರಯ್ಯ. ಹುಯ್ಯಲಿಟ್ಟೆನು ಗಣಂಗಳು ಕೇಳಿರಯ್ಯ, ಕೂಡಲಸಂಗಮದೇವನೆನ್ನ ಕಾಡಿಹನಯ್ಯ.

ಇಳಿಯಬಿಡು = ಕೈಬಿಡು, ಉಪೇಕ್ಷೆ ಮಾಡು; ಬಟ್ಟೆ = ದಾರಿ; ಹೊಲಬುಗೆಡು = ರೀತಿಯನ್ನು ತಪ್ಪು; ಹುಯ್ಯಲಿಡು = ಗಟ್ಟಿಯಾಗಿ ಕೂಗು; ಗಣಂಗಳು = ಶಿವಶರಣರು.

ಭಾವಃ— ಪರಮಾತ್ಮನೇ, ನೀನು ನನ್ನನ್ನು ಜಗತ್ತಿನಲ್ಲಿ ಹುಟ್ಟಿಸಿರುವಿ. ಹುಟ್ಟಿಸಿದ ಬಳಿಕ ನೀನು ನನ್ನ ಕೈಬಿಡುವದು ಉಚಿತವಾದುದಲ್ಲ. ಕೈಬಿಟ್ಟರೆ ಜನರ ಅಪಹಾಸ್ಯಕ್ಕೆ ಗುರಿಯಾಗುವವನು ನೀನೇ. ಆದ್ದರಿಂದ ಹರನೇ, ನೀನು ನನ್ನನ್ನು ಪರಮಾತ್ಮನ ಕಡೆಗೆ ಹೋಗಬೇಕಾದ ದಾರಿಯಲ್ಲಿರಿಸು. ನಾನು ಈಗ ಏನು ಮಾಡಬೇಕೆಂಬುದು ನನಗೆ ತಿಳಿಯಲಾರದಾಗಿದೆ. ಆದ್ದರಿಂದ ನೀನೇ ನನಗೆ ಯೋಗ್ಯ ಹಾದಿಯನ್ನು ತೋರಿಸು. ನಿನ್ನ ಹೆಸರು ತೆಗೆದುಕೊಂಡು ನಾನು ಕೂಗುತ್ತಲಿದ್ದೇನೆ. ಎಲೋ ಶಿವಶರಣರೇ, ಕೇಳಿರಿ. ಕೂಡಲಸಂಗಮನು ನನ್ನನ್ನು ಈಗ ಬಹಳ ಕಾಡುತ್ತಲಿದ್ದಾನೆ. ಹೀಗೆ ಬಸವೇಶ್ವರನು ಶರಣರ ಮುಂದೆ ತನ್ನ ದೂರನ್ನು ಹೇಳಿಕೊಳ್ಳುತ್ತಾನೆ. ಇದು ಬಸವೇಶ್ವರನ ಭಕ್ತಿಯ ಉದ್ರೇಕದ ನುಡಿಯು ಎಂದು ವಾಚಕರು ತಿಳಿಯತಕ್ಕದ್ದು.

ನನ್ನ ಅವಗುಣಗಳನ್ನು ದೂರಮಾಡಬೇಕೆಂದು ಪ್ರಾರ್ಥನೆ.

(೭೬) ಬೆಳೆಯ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ, ತಿಳಿಯಲೀಯದು, ಎಚ್ಚರಲೀಯದು. ಎನ್ನವಗುಣವೆಂಬ ಕಸವ ಕಿತ್ತು, ಸಲಹಯ್ಯ ಲಿಂಗ ತಂದೆ. ಸುಳಿದೆಗೆದು ಬೆಳೆವೆನು ಕೂಡಲ ಸಂಗಮದೇವಾ.

ಬೆಳೆಯ ಭೂಮಿ = ಫಲದ್ರುಪವಾದ ಭೂಮಿ; ಈಯದು = ಕೊಡದು.

ಭಾವಃ— ಫಲದ್ರುಪವಾದ ಭೂಮಿಯಲ್ಲಿ ಕಸ ಹುಟ್ಟಲು ಅದು ಅಲ್ಲಿಯ ಬೆಳೆಯನ್ನು ಬೆಳೆಯಗೊಡುವದಿಲ್ಲ. ಆದ್ದರಿಂದ ಆ ಕಸವನ್ನು ಕಿತ್ತು ಹಾಕಬೇಕಾಗುತ್ತದೆ. ಹಾಗೆಯೇ ನನ್ನಲ್ಲಿರುವ ಕೆಟ್ಟಗುಣಗಳೆಂಬ ಕಸವನ್ನು ಕಿತ್ತು ಹಾಕಿ, ಎಲೋ ಪರಮಾತ್ಮನೇ, ನನ್ನನ್ನು ಸಲಹು. ಈ ಕಸವನ್ನು ದೂರಮಾಡಲು ಅಲ್ಲಿ ಒಳ್ಳೇ ಬೆಳೆಯಾಗುವದು. ಆಗ ನನಗೆ ಎಚ್ಚರು ಅಂದರೆ ಜ್ಞಾನವು ಉಂಟಾಗುತ್ತದೆ.

(೭೭) ಕಾಯವಿಕಾರ ಕಾಡಿಹುದಯ್ಯಾ! ಮನವಿಕಾರ ಕೂಡಿಹುದಯ್ಯಾ. ಇಂದ್ರಿಯವಿಕಾರ ಸುಳಿವುದಯ್ಯಾ! ಸುಳಿವಿನೊಳಗೆ ಸುಳಿವುತಲಿದೇನೆ. ಸಿಲುಕಿಸದಿರಯ್ಯಾ. ಅನ್ಯಚಿತ್ತದಲ್ಲಿರಿಸದಿರಯ್ಯ. ನಿಮ್ಮ ಚಿತ್ತವಿರಿಸಯ್ಯ. ಅನುಪಮ ಸುಖಸಾರಾಯ ಶರಣರಲ್ಲಿ ಕೂಡಲ ಸಂಗಮದೇವಯ್ಯ ಇದನೆ ಬೇಡುವೆನಯ್ಯಾ.

ಸುಳಿವು = (೧) ತಿರುಗುವುದು, (೨) ತಿರುಗುಣಿ ಮಡುವು; ಅನುಪಮ = ಜೋಡಿಲ್ಲದ; ಸಾರಾಯ = ಸಾರ.

ಭಾವಃ— ಶರೀರದ ವಿಕಾರಗಳು ನನ್ನನ್ನು ಕಂಗೆಡಿಸುತ್ತಲಿವೆ. ಮನಸ್ಸಿನ ವಿಕಾರಗಳು ನನ್ನಲ್ಲಿ ಮನೆಮಾಡಿಕೊಂಡಿವೆ. ಇಂದ್ರಿಯ ವಿಕಾರಗಳು ನನ್ನಲ್ಲಿ ಹರಿದಾಡುತ್ತಿವೆ. ಇವುಗಳೆಲ್ಲ ನನ್ನನ್ನು ಸುತ್ತುತ್ತಿದ್ದು ಅವುಗಳ ಸೆಳವಿಗೆ ನಾನು ಸಿಕ್ಕಿದ್ದೇನೆ. ಅವುಗಳನ್ನು ನನ್ನಿಂದ ದೂರಮಾಡು. ನಿನ್ನ ಧ್ಯಾನವನ್ನು ಬಿಟ್ಟು ಬೇರೆ ಕಡೆಗೆ ನನ್ನ ಮನಸ್ಸು ಹೋಗದಂತೆ ಮಾಡು. ಶಿವಶರಣರು ನನಗೆ ಎಣೆ ಇಲ್ಲದ ಸುಖವನ್ನು ಕೊಡುವವರಾದ್ದರಿಂದ, ಎಲೋ ಪರಮಾತ್ಮನೇ, ಅವರಲ್ಲಿ ನಾನು ಇದನ್ನೇ ಬೇಡುತ್ತೇನೆ.

(೭೮) ಬಡ ಪಶು ಪಂಕದಲ್ಲಿ ಬಿದ್ದರೆ, ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೇ? ಶಿವ, ಶಿವಾ! ಹೋದೆಹೆ, ಹೋದೆಹೆನಯ್ಯಾ. ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ. ಪಶು ನಾನು, ಪಶುಪತಿ ನೀನು. ತುಡುಗುಣಿ ಎಂದು ಎನ್ನ ಹಿಡಿದು ಬಡಿಯದ ಮುನ್ನ, ಒಡೆಯ ನಿಮ್ಮ ಬಯ್ಯದಂತೆ ಮಾಡು, ಕೂಡಲಸಂಗಮದೇವಾ.

ಪಂಕ = ಕೆಸರು.

ಭಾವಃ— ಬಡ ಆಕಳು ಕೆಸರಲ್ಲಿ ಬಿದ್ದರೆ, ಅದು ಕಾಲ ಬಡಿಯುವದಲ್ಲದೆ ಬೇರೆ ಏನನ್ನೂ ಮಾಡಲಾರದು. ಎಲೋ ಪರಮಾತ್ಮನೇ, ನನಗೆ ಬೇರೆ ಗತಿ ಇಲ್ಲ. ಆದ್ದರಿಂದ ನಾನು ನಿನ್ನ ಮನಸ್ಸಿನತ್ತ ಬರುವಂತೆ ಮಾಡು. ನಾನು ಬಡ ಪಶುವು. ನೀನು ಪಶುಪತಿಯು, ಎಲ್ಲರನ್ನೂ ಸಂರಕ್ಷಿಸುವವನು. ಜನರು ತುಡುಗುಣಿ ಆಕಳು ಸಿಕ್ಕಲು ಅವರು ಅದನ್ನೂ ಆ ಆಕಳಿನ ಯಜಮಾನನ್ನೂ ಬಯ್ಯುವದುಂಟು. ಈ ಸ್ಥಿತಿಯು ನನಗೆ ಬಾರದಂತೆ ಮಾಡು. ಅಂದರೆ ನನ್ನ ಅವಗುಣಗಳನ್ನು ನೋಡಿ ಜನರು ನನ್ನನ್ನೂ ನಿನ್ನನ್ನೂ ಕೂಡಿಯೇ ಬಯ್ಯುತ್ತಾರೆ. ಹಾಗಾಗದಂತೆ ಮಾಡೆಂದು ಬಸವೇಶ್ವರನು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತಾನೆ.

(೭೯) ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯ! ಪಶುವೇನ ಬಲ್ಲುದು? ಹಸುರೆಂದೆಳಸುವುದು. ವಿಷಯರಹಿತನ ಮಾಡಿ, ಭಕ್ತಿರಸವ ದಣಿಯ ಮೇಯಿಸಿ, ಸುಬುದ್ಧಿ ಎಂಬ ಉದಕವನೆರೆದು, ನೋಡಿ ಸಲಹಯ್ಯ ಕೂಡಲಸಂಗಮದೇವಾ.

ವಿಷಯ = ವಿಕಾರ; ಹಸುರ = ಹುಲ್ಲು; ಎಳಿಸು = ಮನಸ್ಸು ಮಾಡು.

ಭಾವಃ— ಜಗತ್ತಿನಲ್ಲೆಲ್ಲ ಮನಸ್ಸನ್ನು ಎಳೆಯುವಂಥ ವಸ್ತುಗಳು ತುಂಬಿ ಹೋಗಿವೆ. ಪಶುವು ತನ್ನೆದುರಿಗೆ ಹುಲ್ಲನ್ನು ನೋಡಲು ಅದನ್ನು ತಿನ್ನಲು ಹೇಗೆ ಅದು ಅಪೇಕ್ಷೆ ಪಡುತ್ತದೆಯೋ ಹಾಗೆ ನನ್ನ ಮನಸ್ಸು ಇವುಗಳ ಕಡೆಗೆ ಹರಿಯುತ್ತದೆ. ಆದ್ದರಿಂದ ಪರಮಾತ್ಮನೇ, ಅಂಥವುಗಳ ಕಡೆಗೆ ನನ್ನ ಮನಸ್ಸು ಹೋಗದಂತೆ ಮಾಡು ಮತ್ತು ಭಕ್ತಿ ಎಂಬ ರಸದಿಂದ ನನ್ನನ್ನು ತೃಪ್ತಿಬಡಿಸಿ, ಸುಬುದ್ಧಿ ಎಂಬ ನೀರನ್ನು ಹಣಿಸಿ, ನನ್ನನ್ನು ಸಲುಹು.

(೮೦) ವಚನದ ಹುಸಿ ನುಸುಳೆಂತು ಮಾಬುದೆನ್ನ? ಮನದ ಮರ್ಕಟತನವೆಂತು ಮಾಬುದೆನ್ನ? ಹೃದಯ ಕಿಲ್ಬಿಷವೆಂತು ಮಾಬುದೆನ್ನ? ಕಾಯವಿಕಾರಕ್ಕೆ ತೋರಿ ಸಲುವೋದೆನು. ಎನಗಿದು ವಿಧಿಯೋ ಕೂಡಲಸಂಗಮದೇವಾ?

ನುಸುಳು = ಓಡಾಟ; ಮಾಬುದು = ನಿಲ್ಲುವದು; ಮರ್ಕಟ = ಮಂಗ; ಕಿಲ್ಬಿಷ = ಹೊಲಸು; ಸಲುವೋಗು = ಒಳಗಾಗು, ಗುರಿಯಾಗು.

ಭಾವಃ— ನನ್ನ ಮಾತಿನಲ್ಲಿ ಸುಳ್ಳಿನ ಓಡಾಟ ಹೇಗೆ ನಿಂತೀತು! ನನ್ನ ಮನಸ್ಸಿನ ಮಂಗತನವು ಹೇಗೆ ನಿಂತೀತು! ನನ್ನ ಹೃದಯದ ಹೊಲಸುತನವು ಹೇಗೆ ಹೋದೀತು! ನನ್ನ ಶರೀರದ ವಿಕಾರಗಳು ನನ್ನಲ್ಲುಂಟಾಗಿ ಅವುಗಳಿಗೆ ಗುರಿಯಾಗಿದ್ದೇನೆ. ಈ ವಿಧಿಯು ನನಗಾಗಬೇಕೇ, ಎಂದು ಬಸವೇಶ್ವರನು ದುಃಖಿಸುತ್ತಾನೆ.

(೮೧) ಅಶನ ಕುಂದದು, ವ್ಯಸನ ಮಾಣದು, ಆರತವಡಗದು, ವ್ಯವಹಾರ ಮಾಣದು. ಮಜ್ಜನಕ್ಕೆರೆವೆನಯ್ಯ! ಕಾಯವಿಕಾರಿಯಾನು, ಜೀವವಿಕಾರಿಯಾನು. ಮಜ್ಜನಕ್ಕೆರೆವೆನಯ್ಯಾ! ಶರಣನಲ್ಲ, ಲಿಂಗೈಕ್ಯನಲ್ಲ. ಕೂಡಲಸಂಗಮದೇವರಲ್ಲಿ ಅಂತರ ಬೆಂತರ ನಾನಯ್ಯ.

ಅಶನ = ಊಟ; ವ್ಯಸನ = ವಿಕಾರ; ಆರತ = ಲಂಪಟತನ; ಮಜ್ಜನ = ಸ್ನಾನ, ಅಭಿಷೇಕ; ಅಂತರಬೆಂತರ=ಆಕಾಶದಲ್ಲಿ ತಿರುಗಾಡುವ ಪಿಶಾಚಿ.

ಭಾವಃ— ನನ್ನಲ್ಲಿ ತಿನ್ನುವ ಆಸೆಯು ಹೋಗದು. ಸ್ತ್ರೀವ್ಯಸನವು ನಿಲ್ಲದು. ಸಂಸಾರಲಂಪಟತನವು ಬಿಡದು. ನಿತ್ಯದ ವ್ಯವಹಾರಗಳಲ್ಲಿಯೇ ಮಗ್ನನಾಗಿರುತ್ತೇನೆ. ಆದರೂ ಲಿಂಗಪೂಜೆಯಲ್ಲಿ ತೊಡಗಿರುತ್ತೇನೆ. ಇಂಥ ಪೂಜೆಯು ಉಪಯೋಗವಿಲ್ಲೆಂದು ಬಸವೇಶ್ವರನ ಅಭಿಪ್ರಾಯವು. ಯಾಕಂದರೆ ಕಾಯವಿಕಾರಗಳೂ ಜೀವವಿಕಾರಗಳೂ ನನ್ನಲ್ಲಿ ತುಂಬಿವೆ. ಆದರೂ ಲಿಂಗಪೂಜೆ ಮಾಡುತ್ತೇನೆ! ಅದರಿಂದ ಪ್ರಯೋಜನವೇನು? ಈ ನಡೆಯುಳ್ಳವನಾದ್ದರಿಂದ ನಾನು ಶರಣನಾಗಲಾರೆನು, ಲಿಂಗೈಕ್ಯಸ್ಥಿತಿಯನ್ನು ಹೊಂದಲಾರೆನು. ನಾನು ಅಂತರಾಳದಲ್ಲಿ ತಿರುಗುತ್ತಿರುವ ಪಿಶಾಚಿಯೋ ಹೊರ್ತು ಬೇರೇನೂ ಅಲ್ಲ.

(೮೨) ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯ! ಎಂತೋ ಶಿವಾಚಾರವೆನಗೆ ಸಾಧ್ಯವಪ್ಪುದಯ್ಯ! ಕಾಮ, ಕ್ರೋಧ, ಲೋಭ,

ಮೋಹ, ಮದ, ಮತ್ಸರಂಗಳಿಂದ ಕಟ್ಟುವಡೆದೆನು. ಹಸಿವು, ತೃಷೆ, ವ್ಯಸನದಿಂದ ಕುದಿವುತ್ತಿದೇನೆ. ಪಂಚೇಂದ್ರಿಯ ಸಪ್ತಧಾತು ಹಂಚು ಹರಿವಮಾಡಿ ಕಾಡಿಹವಯ್ಯಾ. ಅಯ್ಯಾ ಅಯ್ಯಾ, ಎನ್ನ ಹುಯ್ಯಲ ಕೇಳಯ್ಯ. ಕೂಡಲಸಂಗಮದೇವ ನಾನೇವೆನಯ್ಯ?

ಕಟ್ಟುವಡೆದನು = ಕಟ್ಟಿಹಾಕಲ್ಪಟ್ಟೆನು; ತೃಷೆ = ನೀರಡಿಕೆ; ಮತ್ಸರ = ಹೊಟ್ಟೆಕಿಚ್ಚು; ಪಂಚೇಂದ್ರಿಯ = ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ ಇವು ಇವೆ. ಸಪ್ತಧಾತು = ಇವು ರಸ, ರಕ್ತ, ಮಾಂಸ, ಮೇದಸ್ಸು, ಮಜ್ಜೆ, ಎಲುವು, ರೇತಸ್ಸು ಇವು ಇವೆ. ಹಂಚುಹರಿ=ಒಡೆದ ಹಂಚು; ಹುಯ್ಯಲ = ಗಟ್ಟಿಯಾಗಿ ಅಳುವ ಶಬ್ದ; ನಾನೇವೆನಯ್ಯ = ನಾನೇನು ಮಾಡಲಿ.

ಭಾವಃ— ನಾನು ಶಿವಭಕ್ತಿಯನ್ನು ಏತಕ್ಕೆ ಹೋಲಿಸಿ ನುಡಿಯಲಿ? ಶಿವಾಚಾರವು ನನಗೆ ಹೇಗೆ ಸಾಧ್ಯವಾಗುವದು? ನನ್ನನ್ನು ಕಾಮಕ್ರೋಧಾದಿಗಳು ಕಟ್ಟಿ ಹಾಕಿಬಿಟ್ಟಿವೆ. ಹಸಿವು, ನೀರಡಿಕೆ, ಕಾಮವಿಕಾರಗಳಲ್ಲಿ ನಾನು ಕುದಿಯುತ್ತಲಿದ್ದೇನೆ. ಪಂಚೇಂದ್ರಿಯಗಳು ಮತ್ತು ಸಪ್ತಧಾತುಗಳು ನನ್ನನ್ನು ಪುಡಿ ಪುಡಿ ಮಾಡಿರುವದರಿಂದ ನಾನು ಒಡೆದ ಹಂಚಿನಂತಾಗಿದ್ದೇನೆ. ಎಲೋ ಪರಮಾತ್ಮನೇ, ನನ್ನ ರೋದನ ಸ್ವರವನ್ನು ಕೇಳು, ನಾನೇನು ಮಾಡಲಿ, ಎಂದು ಬಸವೇಶ್ವರನು ದುಃಖಿಸುತ್ತಿದ್ದಾನೆ.

(೮೩) ಆಸೆಯಾಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ ಇವನೆನ್ನ ನಾಲಿಗೆಯ ಮೇಲಿಂದ ತ್ತೆಗೆದು ಕಳೆಯಯ್ಯಾ. ಅದೆಂತೆಂದೊಡೆ, ನಿಮ್ಮತ್ತಲೆನ್ನ ಬರಲೀಯವು. ಇದು ಕಾರಣ ಇವೆಲ್ಲವ ಕಳೆದು ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ.

ಆಮಿಷ = ಲೋಭ; ತಾಮಸ = ದುಷ್ಟತನ; ವಿಷಯ = ಸ್ತ್ರೀಲಂಪಟತನ; ಕುಟಿಲ = ಕಪಟತನ; ಕುಹಕ = ವಂಚನೆ, ಕ್ರೋಧ = ಸಿಟ್ಟು; ಕ್ಷುದ್ರ = ನೀಚತನ; ಮಿಥ್ಯೆ = ಸುಳ್ಳು, ಮೋಸ; ಕಳೆ = ಬಿಸಾಡು; ಪಂಚೈವರು = ಪಂಚೇಂದ್ರಿಯಗಳು.

ಭಾವಃ— ಆಸೆ, ಲೋಭ, ದುಷ್ಟತನ, ಸುಳ್ಳು, ಸ್ತ್ರೀಲಂಪಟತನ, ವಂಚನೆ, ಸಿಟ್ಟು, ನೀಚತನ, ಮೋಸ ಇವುಗಳು ನನ್ನ ನಾಲಿಗೆಯ

ಮೇಲಿರದಂತೆ ಅವುಗಳನ್ನು ದೂರತೆಗೆದು ಹಾಕು. ಅದೇಕೆಂದರೆ, ಅವು ನಿನ್ನ ಕಡೆಗೆ ಬರಗೊಡುವದಿಲ್ಲ. ಇವೆಲ್ಲವನ್ನು ನೀನು ದೂರಮಾಡಿ ನನ್ನ ಇಂದ್ರಿಯಗಳನ್ನೆಲ್ಲ ಭಕ್ತರನ್ನಾಗಿ ಮಾಡು.

ಶರಣರನ್ನು ಅವಲಂಬಿಸು.

(೮೪) ಲಿಂಗವ ನೆಚ್ಚದೀ ಮನವು. ಜಂಗಮವ ನಂಬದೀ ಮನವು ಕೂಪರ ಕಂಡರೆ, ಒಲ್ಲದೀ ಮನವು. ಈ ಮನದ ಭ್ರಮೆಯನೆಲ್ಲವ ಮರಿಸಿ ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮ ದೇವಾ.

ಕೂಪರು = ಪ್ರೀತಿಸುವವರು.

ಭಾವಃ— ನನ್ನ ಮನಸ್ಸು ಲಿಂಗವನ್ನು ನಂಬುವದಿಲ್ಲ. ಜಂಗಮದ ಮೇಲೆ ಅದಕ್ಕೆ ವಿಶ್ವಾಸವಿಲ್ಲ. ತನ್ನನ್ನು ಪ್ರೀತಿಸುವವರನ್ನು ಕಂಡರೆ ಅದು ಅವರನ್ನು ಒಲ್ಲದು. ನನ್ನ ಮನಸ್ಸಿನಲ್ಲಿ ಇಂಥ ಭ್ರಮೆಗಳಿದ್ದು ಅದು ಅವುಗಳನ್ನೆಲ್ಲ ಬಿಟ್ಟುಬಿಡುವಂತೆ ಮಾಡು ಮತ್ತು ನಿಮ್ಮ ಶರಣರಿಗೆ ಶರಣೆನ್ನುವಂತೆ ಕರುಣಿಸು.

(೮೫) ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ, ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸಯ್ಯಾ ಕೂಡಲಸಂಗಮದೇವಾ.

ಭಾವಃ— ನಿಮ್ಮ ಶರಣರ ಹೊರ್ತು ಬೇರೆ ಯಾವದೂ ನನಗೆ ಕಾಣದಂತೆ ಮತ್ತು ಕೇಳದಂತೆ ಮಾಡು. ನಿಮ್ಮ ಶರಣರ ಪಾದವಲ್ಲದೆ ಬೇರೆ ಯಾವ ಆಶೆಗಳು ನನ್ನಲ್ಲಿ ಇರದಂತೆ ಮಾಡು ಎಂದು ಬಸವೇಶ್ವರನು ದೇವರಲ್ಲಿ ಬೇಡಿಕೊಳ್ಳುತ್ತಾನೆ.

(೮೬) ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾರೆನಯ್ಯ! ನಿಮ್ಮನ್ನವ ಪೂಜಿಸಿ ಭವಬಂಧನ ಬಿಡದೇಕಯ್ಯಾ? ಹಿಂದಣ ಜನ್ಮದ ಚಿನ್ಹ ಬಿಡದನ್ನಕ್ಕ, ನಿಮ್ಮ ಪೂಜಿಸಿ ಏವೆನಯ್ಯ! ಎನ್ನ ಮನದ ಅವಗುಣವ ಕಳೆದು ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.

ನಾರು = ಸಮೀಪಕ್ಕೆ ಬರು; ಭವ = ಸಂಸಾರ; ಏನೆನಯ್ಯ = ಏನು ಮಾಡಲಿ; ಅವಗುಣ = ಕೆಡಕು ಗುಣ.

ಭಾವಃ— ಎಲ್ಲವನ್ನು ಕೊಡತಕ್ಕ ಕಾಮಧೇನು ನಿನ್ನ ಹತ್ತಿರ ಇದ್ದದರಿಂದ ನಾನು ನಿನ್ನನ್ನೇ ಬೇಡುವೆನೇ ಹೊರ್ತು ಬೇರೆ ಯಾರನ್ನೂ ಬೇಡಲಾರೆನು. ನಿನ್ನನ್ನು ಪೂಜಿಸಿದ ಬಳಿಕ ಈ ಸಂಸಾರದ ಬಂಧ ನವು ನನ್ನನ್ನು ಏಕೆ ಬಿಡಬಾರದು? ನನ್ನ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳ ಪರಿಣಾಮದಿಂದ ಈಗಿನ ನನ್ನ ಜನ್ಮವಾಗಿರುವದರಿಂದ ನನ್ನ ಕರ್ಮಗಳು ನಾಶವಾಗದ ಹೊರ್ತು ನಿಮ್ಮನ್ನು ಪೂಜಿಸಿದರೆ ಏನು ಫಲ? ನನ್ನ ಮನಸ್ಸಿನಲ್ಲಿ ದುರ್ಗುಣಗಳಿವೆ. ಅವುಗಳನ್ನು ನಾನು ದೂರ ಮಾಡಿ ನಿಮ್ಮ ಶರಣರಿಗೆ ಶರಣುಹೊಕ್ಕರೆ ಈ ನನ್ನ ಹಿಂದಿನ ಕರ್ಮಗಳು ಬಿಟ್ಟುಹೋಗುವವು. ಆದ್ದರಿಂದ ನಾನು ಹೀಗೆ ಅವರಿಗೆ ಶರಣುಹೊಗುವದನ್ನೇ ದಯಮಾಡಿ ಕರುಣಿಸು.

ಸತಿಪತಿಭಾವದ ವಚನಗಳು.

(೮೭) ಇಂದೆನ್ನ ಮನೆಗೆ ಪ್ರಮಥರು ಬಂದಿಹರೆಂದು, ಗುಡಿ ತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ, ರಂಗವಲಿಯನಿಕ್ಕಿ, ಉಘೇ, ಚಾಂಗು, ಭಲಾ ಎಂಬೆ, ಕೂಡಲಸಂಗನ ಶರಣರು ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ.

ಗುಡಿ = ನಿಶಾನಿ; ಷಡುಸಮ್ಮಾರ್ಜನೆ = ಆರುತರದ ತೊಳೆಯುವಿಕೆಗಳು. ಅವು ಗೋಮಯ, ಗೋರೋಜ, ಮೂತ್ರ, ದಧಿ, ಕ್ಷೀರ, ಘೃತ ಇವುಗಳಿರುತ್ತವೆ; ಒಕ್ಕುದು = ಬಿಟ್ಟದ್ದು.

ಭಾವಃ— ಇಂದು ನನ್ನ ಮನೆಗೆ ಶರಣರು ಬರುವರೆಂದು ನಾನು ನನ್ನ ಮನೆಯ ಮುಂದೆ ಪತಾಕೆ ಮತ್ತು ತೋರಣಗಳನ್ನು ಕಟ್ಟಿ ಆರು ವಿಧವಾಗಿ ಮನೆಯನ್ನು ಸಾರಿಸಿ ರಂಗವಲಿಯನ್ನು ಹಾಕಿ, ಅವರು ಬಂದ ಕೂಡಲೆ ನಾನು ನನ್ನ ಹರ್ಷೋದ್ಗಾರಗಳಿಂದ ಅವರನ್ನು ಇದಿರುಗೊಂಬೆನು. ಯಾಕಂದರೆ ಅವರು ತಮ್ಮ ಸೋಂಕಿನಿಂದ ಪವಿತ್ರವಾದ ಪದಾರ್ಥಗಳನ್ನು ನನಗೆ ಕೊಡುವರು.

(೮೮) ಬಂದಿಹನೆಂದು, ಬಾರದಿದ್ದರೆ, ಬಟ್ಟೆಗಳ ನೋಡುತ್ತ ಇದ್ದೆನಯ್ಯ. ಇನ್ನಾರನಟ್ಟುವೆ? ಇನ್ನಾರನಟ್ಟುವೆ? ಇನ್ನಾರ ಪಾದವ ಹಿಡಿವೆನಯ್ಯ? ಕೂಡಲಸಂಗನ ಶರಣರು ಬಾರದಿದ್ದರೆ, ಅಟ್ಟುವೆನೆನ್ನ ಪ್ರಾಣವನು.

ಬಟ್ಟೆ = ದಾರಿ.

ಶಿವಶರಣರು ನನ್ನ ಮನೆಗೆ ಎಂದು ಬರುವರೋ ಎಂಬುದನ್ನು ನಿರೀಕ್ಷಿಸುತ್ತಲಿದ್ದೇನೆ. ಅವರು ಬಾರದಿದ್ದರೆ, ಅವರು ಯಾವಾಗ ಬರುವರೋ ಎಂಬುದನ್ನೇ ದಾರಿ ನೋಡುತ್ತ ಇದ್ದೇನೆ. ಅವರನ್ನು ಕರತರಲು ನಾನು ಯಾರನ್ನು ಕಳಿಸಲಿ? ಯಾರ ಮೊರೆಹೊಗಲಿ? ಅವರು ಬರದಿದ್ದರೆ ಅವರನ್ನು ನೆನೆಯುತ್ತಲಿದ್ದ ನನ್ನ ಪ್ರಾಣವನ್ನೇ ಅವರಿದ್ದಲ್ಲಿಗೆ ಕಳಿಸುವೆನು.

ಟೀಪುಃ— ಶಿವಶರಣರು ಶಿವಾನುಭವಗೋಷ್ಠಿಗೆ ಬಹಳ ಮಹತ್ವ ಕೊಡುವದುಂಟು. ಆದ್ದರಿಂದ ಬಸವೇಶ್ವರನು ಈ ರೀತಿಯ ವಚನಗಳನ್ನು ಇಲ್ಲಿ ನುಡಿಯುತ್ತಾನೆ.

(೮೯) ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ, ಬರವ ಹಾರುತ್ತಿರ್ದೆನೆಲೆಗವ್ವಾ. ತರಗೆಲೆ ಗಿರಿಕೆಂದಡೆ, ಹೊರಗನಾಲಿಸುವೆ. ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವ. ಕೂಡಲಸಂಗನ ಶರಣರು ಬಂದು ಬಾಗಿಲ ಮುಂದೆ ನಿಂದು, 'ಶಿವಾ' ಎಂದೊಡೆ, ಸಂತೋಷಬಟ್ಟೆನೆಲೆಗವ್ವ.

ಹಂಜರ = ಪಂಜರ; ಸೊಡರು = ದೀಪ; ತರಗೆಲೆ = ಒಣಗಿದ ಎಲೆ; ಆಲಿಸು = ಕೇಳು; ಬರವ = ಆಗಮನ; ಹಾರು=ಎದುರು ನೋಡು.

ಭಾವಃ— ಗಿಳಿಯ ಪಂಜರವನ್ನು ಅದರ ಸ್ಥಳದಲ್ಲಿಟ್ಟು ದೀಪಕ್ಕೆ ಎಣ್ಣೆಯನ್ನು ಹಾಕಿ, ಬತ್ತಿಯನ್ನು ಮುಂದಕ್ಕೆ ಜಾಚಿ, ಶಿವಶರಣರು ಯಾವಾಗ ಬರುವರೋ ಎಂಬುವನ್ನು ನಾನು ಎದುರುನೋಡುತ್ತ ಕುಳಿತಿದ್ದೇನೆ. ಹೊರಗೆ ಎಲೆಗಳ ಸ್ವಲ್ಪ ಸಪ್ಪಳವಾದರೆ ನಾನು ಹೊರಗೆ ಕಿವಿಗೊಟ್ಟು ಕೇಳುತ್ತೇನೆ. ಶಿವಶರಣರು ಇನ್ನೂ ಬರಲಿಲ್ಲೆಂದು ನನ್ನ ಮನಸ್ಸು ಕಾತರಗೊಂಡಿದೆ. ಅವರು ನನ್ನ ಮನೆಯ ಬಾಗಿಲಲ್ಲಿ ಬಂದು ನನ್ನನ್ನು ಕರೆದರೆ, ಆಗ ನನಗೆ ಅತ್ಯಂತ ಸಂತೋಷವಾಗುವದು.

(೯೦) ಭಕ್ತಿರತಿಯ ವಿಕಳತೆಯ ಯುಕುತಿಯ ಏನ ಬೆಸಗೊಂಬಿರಯ್ಯಾ? ಕಾಮಿಂಗೆ ಉಂಟೇ ಲಜ್ಜೆ ನಾಚಿಕೆ? ಕಾಮಿಂಗೆ ಉಂಟೇ ಮಾನಾಪಮಾನವು? ಕೂಡಲಸಂಗನ ಶರಣರಿಗೊಲಿದ ಮರುಳನನೇನ ಬೆಸಗೊಂಬಿರಯ್ಯಾ?

ವಿಕಳತೆ = ವಿಕಾರ; ಯುಕುತಿ = ಯುಕ್ತಿ, ರೀತಿ; ಬೆಸಗೊಳ್ಳು = ಕೇಳು; ಮರುಳ = ಹುಚ್ಚ.

ಭಾವಃ— ಭಕ್ತಿ ಎಂಬ ಕಾಮವಿಕಾರದ ರೀತಿಯನ್ನು ನನಗೇನು ಕೇಳುವಿರಿ? ಇಂಥ ವಿಕಾರಕ್ಕೆ ಒಳಗಾದವನಿಗೆ ಲಜ್ಜೆ, ನಾಚಿಕೆಗಳು ಉಂಟೇ? ಅವನಿಗೆ ಮಾನಾಪಮಾನಗಳು ಇವೆಯೋ? ಶಿವಶರಣರನ್ನು ಮೋಹಿಸಿದ ಈ ಹುಚ್ಚನನ್ನು ನೀವೇನು ಕೇಳುವಿರಿ?

(೯೧) ಕಂಡರೆ ಮನೋಹರವಯ್ಯಾ. ಕಾಣದಿದ್ದರೆ ಅವಸ್ಥೆ ನೋಡಯ್ಯಾ. ಹಗಲಿರುಳಹುದು. ಇರುಳು ಹಗಲಹುದು. ಎಂತಯ್ಯಾ? ಅಳಿವಾಡಿ ಕಳೆವೆನು. ಒಂದು ಜುಗ ಮೇಲೆ ಕೆಡೆದಂತೆ. ಕೂಡಲಸಂಗನ ಶರಣರನಗಲುವ ಧಾವತಿಯಿಂದ ಮರಣವೇ ಲೇಸು ಕಂಡಯ್ಯಾ.

ಅವಸ್ಥೆ = ದುರವಸ್ಥೆ; ಅಳಿವಾಡಿ = ಸೂರೆಮಾಡಿ; ಕಳೆ = ಬಿಡು; ಜುಗ = ನಾಲ್ಕು ಯುಗಗಳು ೧೮ ವೇಳೆ ತಿರುಗಿ ಬಂದಷ್ಟು ಕಾಲಾವಧಿ; ಕೆಡೆ = ಬೀಳು; ಧಾವತಿ = ಶ್ರಮ.

ಭಾವಃ— ಶಿವಶರಣರನ್ನು ಕಂಡರೆ ನನಗೆ ಎಲ್ಲವೂ ಶೋಭಾಯಮಾನವಾಗಿ ಕಾಣುತ್ತದೆ. ಅವರನ್ನು ಕಾಣದಿದ್ದರೆ ನನಗೆ ಕಷ್ಟಕರ ಸ್ಥಿತಿಯು ಪ್ರಾಪ್ತವಾಗುತ್ತದೆ. ಏನು ಮಾಡಲಿ? ನನ್ನದನ್ನೆಲ್ಲವನ್ನೂ ನಾಶಮಾಡಿ ಬಿಡುವೆನು. ನಾಲ್ಕು ಯುಗಗಳು ೧೮ ಸುತ್ತು ಹಾಕಲು, ಅವುಗಳಿಗೆ ಎಷ್ಟು ಅವಧಿಯು ಬೇಕೋ, ಅಷ್ಟು ದಿನಗಳು ಹೋದಂತೆ ನನಗೆ ಭಾಸವಾಗುತ್ತಿದೆ. ಶಿವಶರಣರನ್ನು ಅಗಲಿ ಹೀಗೆ ದುಃಖಪಡುವದಕ್ಕಿಂತ ನಾನು ಸತ್ತುಹೋಗುವದೇ ಲೇಸೆಂದು ಬಸವೇಶ್ವರನು ಹೇಳುತ್ತಾನೆ.

ಆತ್ಮಾರ್ಪಣ.

(೯೨) ಮತಿಮಂದನಾಗಿ ಗತಿಯ ಕಾಣದೆ ಇದ್ದೆನಯ್ಯಾ! ಹುಟ್ಟುಗುರುಡನ ಕೆಯ್ಯ ಕೋಲ ಕೊಟ್ಟು ನಡಿಸುವಂತೆ, ನಡಿಸಯ್ಯ ಎನ್ನ! ನಿಮ್ಮಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು ಮಚ್ಚಿಸು ಕೂಡಲಸಂಗಮದೇವಾ.

ಭಾವಃ— ನನ್ನ ತಿಳಿವಳಿಕೆಯು ಮಂದವಾಗಿದೆ. ಅದಕ್ಕೆ ಮುಂದಿನ ದಾರಿಯು ಕಾಣದಂತಾಗಿದೆ. ಆದರಿಂದ ಜನರು ಹುಟ್ಟುಗುರುಡನ ಕಯ್ಯಲ್ಲಿ ಕೋಲು ಕೊಟ್ಟು ಹೇಗೆ ನಡಿಸುತ್ತಾರೋ ಹಾಗೆ ನೀನು ನನ್ನನ್ನು ನಡಿಸು. ನಿನ್ನ ಅಚ್ಚ ಶರಣರು ಉಂಡು ಬಿಟ್ಟಿದ್ದರ ಮೇಲೆ ನನ್ನ ವಿಶ್ವಾಸವುಂಟಾಗುವ ಹಾಗೆ ಮಾಡಿ ನನ್ನನ್ನು ನಡಿಸು ಎಂದು ಬಸವೇಶ್ವರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ.

(೯೩) ಬಾಣ ಮಯೂರನಂತೆ ಬಣ್ಣಿಸಬಲ್ಲೆನೇ? ಸಿರಿಯಾಳನಂತೆ ಉಣಲಿಕ್ಕ ಬಲ್ಲೆನೇ? ದಾಸಿಮಯ್ಯನಂತೆ, ಉಡಕೊಡಬಲ್ಲೆನೇ? ಉಂಡುಟ್ಟುಕೊಟ್ಟರೆ, ಮುಯ್ಯಿಗೆ ಮುಯ್ಯೆನಿಸಿತ್ತು. ಎನಗೆ ಕೊಟ್ಟರೆ ನಿಮ್ಮ ಧರ್ಮ ಕೂಡಲಸಂಗಮದೇವಾ.

ಭಾವಃ— ಬಾಣ ಮಯೂರರು ಶ್ರೇಷ್ಠ ಕವಿಗಳಿದ್ದು ಅವರು ಸ್ತುತಿಸಿದಂತೆ ನಾನು ನಿನ್ನನ್ನು ಸ್ತುತಿಸಲಾರೆನು. ಸಿರಿಯಾಳನು ತನ್ನ ಮಗನನ್ನು ನಿನಗೆ ಕೊಟ್ಟು ಉಣಿಸಿದನು. ಅವನಂತೆ ಉಣಿಬಡಿಸಲು ನನ್ನಿಂದ ಆಗದು. ದೇವರದಾಸಿಮಯ್ಯನು ೧೨ ವರ್ಷ ಬಟ್ಟೆಯನ್ನು ನೆಯ್ದು ನಿನಗೆ ದಾನ ಮಾಡಿದನು. ಅವನಂತೆ ದಾನ ಮಾಡಲು ನನಗೆ ಬರಲಾರದು. ಹೀಗೆ ನೀನು ಮಾಡಿದ್ದಾದರೆ ಅವರಿಂದ ನೀನು ಇಸಿದುಕೊಂಡು ಅವರಿಗೆ ತಿರುಗಿ ಕೊಟ್ಟಂತಾಗುವದಿಲ್ಲನೇ? ಇದು ಮುಯ್ಯೆನಿಸುತ್ತದೆ. ಆದರೆ ನೀನು ನನ್ನಿಂದ ಏನೂ ತೆಗೆದುಕೊಳ್ಳದೆ, ನೀನೇ ಕೊಟ್ಟಿಯಾದರೆ ಅದು ನನ್ನ ಮೇಲಿನ ನಿನ್ನ ನಿಜವಾದ ಪ್ರೀತಿ ಎಂದು ನಾನು ತಿಳಿಯುತ್ತೇನೆ.

(೯೪) ದಾಸನಂತೆ ತವನಿಧಿಯ ಬೇಡುವನಲ್ಲ. ಚೋಳನಂತೆ ಹೊನ್ನ ಮಳೆಯ ಕರಿಸೆಂಬುವನಲ್ಲ. ಅಂಜದಿರು, ಅಂಜದಿರು. ಅವರಂದವ ನಾನಲ್ಲ. ಎನ್ನ ತಂದೆ ಕೂಡಲಸಂಗಮದೇವ ಸದ್ಭಕ್ತಿಯನೆ ಕರುಣಿಸೆನಗೆ.

ತವನಿಧಿ = ಎಂದೆಂದಿಗೂ ಕಡಿಮೆಯಾಗದ ಹಣದ ಬೊಕ್ಕಸ ; ಅವರಂದವ = ಅವರ ರೀತಿಯುವ;

ಭಾವಃ— ಎಂದೂ ನಾಶವಾಗದ ಬೊಕ್ಕಸವನ್ನು ದೇವರದಾಸಿ ಮಯ್ಯನು ಬೇಡಿದಂತೆ ನಾನು ನಿನ್ನಿಂದ ಬೇಡುವದಿಲ್ಲ. ತನ್ನ ರಾಜ್ಯದಲ್ಲಿ ಬಂಗಾರದ ಮಳೆಯನ್ನು ಸುರಿಸೆಂದು ಚೋಳರಾಜನು ನಿನಗೆ ಕೇಳಿ ಕೊಂಡಂತೆ ನಾನು ಕೇಳುವದಿಲ್ಲ. ಎಲೋ ಪರಮಾತ್ಮನೇ, ನಿನಗೆ ಕೊಡಲಾರದ್ದನ್ನು ನಾನು ಬೇಡುವವನಿದ್ದೇನೆಂದು ನೀನು ಅಂಜಬೇಡ, ಅಂಜಬೇಡ. ನಿನ್ನಲ್ಲಿ ನನ್ನ ಭಕ್ತಿ ಯಾವಾಗಲೂ ಇರುವ ಹಾಗೆ ನೀನು ನನ್ನಲ್ಲಿ ಕರುಣಿಸು. ಇಷ್ಟು ಮಾತ್ರ ನಾನು ನಿನ್ನಲ್ಲಿ ಬೇಡಿಕೊಳ್ಳುತ್ತೇನೆ.

(೯೫) ಸಿರಿಯಾಳನ ಮಗನ ಬಾಣಸವ ಮಾಡಿಸಿ, ಉಣಲೊಲ್ಲದೆ ಕಾಡಿದ. ಚೋಳನ ಮನೆಯುಲುಣಲೊಲ್ಲದೆ ಚನ್ನನ ಮನೆಯುಲುಂಡೆ. ಒಬ್ಬರಿಗೊಂದು ಪರಿಯ ಮಾಡಿದೆ ಕೂಡಲಸಂಗಮದೇವ!

ಬಾಣಸ = ಪಾಕ, ಅಡಿಗೆ.

ಭಾವಃ— ಸಿರಿಯಾಳನು ತನ್ನ ಮಗನನ್ನು ಕೊಂದು ನಿನ್ನ ಸಲುವಾಗಿ ಅಡಿಗೆ ಮಾಡಿದನು. ಆದರೂ ನೀನು ಉಣ್ಣದೆ ಅವನನ್ನು ಕಾಡಿದೆ. ಚೋಳನ ಮನೆಯಲ್ಲಿ ಮೃಷ್ಟಾನ್ನವನ್ನು ನೀನು ಉಣ್ಣದೆ ಮಾದರ ಚನ್ನನ ಮನೆಯ ಅಂಬಲಿಯನ್ನು ಉಂಡೆ. ಪರಮಾತ್ಮನು ಎಂಥ ಪಕ್ಷಪಾತ ಮಾಡುತ್ತಾನಲ್ಲಾ, ಎಂದು ಬಸವೇಶ್ವರನು ಅವನಲ್ಲಿ ರೇಗಿಕೊಳ್ಳುತ್ತಾನೆ. ಇದು ಭಕ್ತಿ ಭಾವವನ್ನು ತೋರಿಸತಕ್ಕ ಅವನ ಒಂದು ರೀತಿಯ ನುಡಿಯಾಗಿದೆ.

(೯೬) ಎಲ್ಲಿ ಹೊಕ್ಕಲ್ಲಿ ನಿಮ್ಮ ವಿಶಾರವ ಮಾಣೆ. ಇದೊಂದು ಗರುವತನವೇ? ದಾಸನ ವಸ್ತ್ರವ ಬೇಡುವುದೊಂದು ಗರುವತನವೇ? ಸಿರಿಯಾಳನ ಮಗನ ಬೇಡುವುದೊಂದು ಗರುವತನವೇ? ಕೋಡಗನ ಹುಲ್ಲಿಕ್ಕಿ ಮುಸುಕ್ಕಿಟ್ಟಂತೆ ಕೂಡಲಸಂಗಮದೇವ ನಿಮ್ಮ ಪರಿ ಬೇರೆ.

ಮಾಣೆ = ಬಿಡೆನು; ಗರುವತನವೇ = ದೊಡ್ಡಸ್ತಿಕೆಯೇ ; ಕೋಡಗ = ಮಂಗ ; ಮುಸುಕಿಡು = ಅಡಗಿಸಿಡು.

ಭಾವಃ— ನಾನು ಎಲ್ಲಿ ಹೋದರೂ ನಿನ್ನ ಧ್ಯಾನವೇ ನನಗೆ ಧ್ಯಾನ. ನಿನ್ನ ಧ್ಯಾನವನ್ನು ನಾನು ಬಿಡಲಾರೆನು. ದೇವರದಾಸಿಮಯ್ಯನಿಗೆ ವಸ್ತ್ರವನ್ನು ಮತ್ತು ಸಿರಿಯಾಳನಿಗೆ ಅವನ ಮಗನನ್ನು ನೀವು ಬೇಡಿ, ಕಾಡಿ

ದಿರಿ. ಇದೆಂತಹ ನಿಮ್ಮ ದೊಡ್ಡಸ್ತಿಕೆಯು? ಮಂಗನನ್ನು ಹುಲ್ಲಲ್ಲಿ ಹಾಕಿ ಅಡಿಗಿಸಿದರೆ, ಅದು ಅಲ್ಲಿ ಸುಮ್ಮನಿರದೆ ಅಲ್ಲಿಂದ ಹೊರಗೆ ಜಿಗಿದು ಬಿಡುತ್ತಿದೆ. ಎಲೋ ಪರಮಾತ್ಮನೇ ಅದರಂತೆಯೇ ನೀನು! ಹೀಗೆ ನೀನು ನನ್ನನ್ನು ಕಾಡಿದರೂ ಕೂಡ ನಾನು ನಿನ್ನ ಧ್ಯಾನವನ್ನು ಎಂದೂ ಬಿಡಲಾರನೆಂದು ಬಸವೇಶ್ವರನು ಇಲ್ಲಿ ಹೇಳುತ್ತಾನೆ.

(೯೭) ಒಬ್ಬರ ಮನೆಯಲುಂಡು ಹೊತ್ತುಗಳೆದೆ. ಒಬ್ಬರ ಮನೆಯ ಲುಡಲೊಂದು ಗಳಿಸಿದೆ. ಗರ್ವ ಬೇಡ ಬೇಡ ನಿನಗೆ. ಚನ್ನಯ್ಯನ ಮನೆಯಂಬಲಿಯನುಂಡು ಬದುಕಿದೆ. ಗರ್ವ ಬೇಡ ಬೇಡ. ಕೂಡಲ ಸಂಗಮದೇವ, ಸಿರಿಯಾಳನಿಂದ ಮಾನಿಸ ಲೋಕಂಗಂಡೆ.

ಮಾನಿಸ ಲೋಕ = ಮನುಷ್ಯಲೋಕ.

ಭಾವಃ— ಸಿರಿಯಾಳನಂಥವನ ಮನೆಯ ಅನ್ನವನ್ನು ನೀನು ಉಂಡೆ. ದೇವರದಾಸಿಮಯ್ಯನಂಥವನ ಕಡೆಯಿಂದ ಹೊದೆಯಲಿಕ್ಕೆ ಬಟ್ಟೆಯನ್ನು ದೊರಕಿಸಿಕೊಂಡೆ. ಎಲೋ ಪರಮಾತ್ಮನೇ, ನಾನು ದೊಡ್ಡವನೆಂದು ನೀನು ಗರ್ವಪಡಬೇಡ. ನೀನು ಮಾದರ ಚನ್ನಯ್ಯನಂಥವನ ಮನೆಯಲ್ಲಿಯ ಅಂಬಲಿಯನ್ನು ಉಂಡೆ. ಆದರಿಂದ ನೀನು ಗರ್ವಪಡಬೇಡ. ಸಿರಿಯಾಳನ ಮೂಲಕ ನೀನು ಮನುಷ್ಯ ಲೋಕಕ್ಕೆ ಬಂದೆ. ಭಕ್ತಿಯುಳ್ಳಂಥವರು ಶ್ರೇಷ್ಠರೆಂದು ಹೇಳುವದೇ ಬಸವೇಶ್ವರನ ಅಭಿಪ್ರಾಯವು.

೯೮. ಕಾಯದ ಕರಣದ ಕೆಯ್ಯಲು ಪದಾರ್ಥವ ಹಿಡಿವಲ್ಲಿ ನಿಮಗೆ ಕೊಡುವ ಭರದ ಭೀತಿಯಿಂದ ಅನರಿಯದಿಪ್ಪೆನಾಗಿ, ಎನ್ನ ನೀನರಿದು ಸಲಹುತಿಪ್ಪೆಯಯ್ಯ ಕೂಡಲ ಸಂಗಮದೇವ.

ಭಾವಃ— ಶರೀರದಲ್ಲಿ ಅನೇಕ ಇಂದ್ರಿಯಗಳಿದ್ದು ಅವುಗಳು ಪದಾರ್ಥಗಳನ್ನು ಕಂಡು ಅವುಗಳ ಸುಖವನ್ನು ಅವು ಅನುಭವಿಸುತ್ತವೆ. ಆ ಸುಖವನ್ನು ನಾನೇ ಸೇವಿಸುತ್ತಿರದೆ ನಿನಗೆ ಅರ್ಪಣಮಾಡುವ ಭರದಲ್ಲಿ ನಾನಿರಬೇಕು. ಆ ಸುಖ ಸೇವನೆಯಲ್ಲಿ ನಾನು ನಿನ್ನಲ್ಲಿ ತದ್ಗತನಾದ್ದರಿಂದ ಆ ಸುಖವನ್ನು ನಾನರಿಯಬಾರದು. ಆದರೆ ಹೀಗೆ ಅನುಭವಿಸಿ ಅರ್ಪಿಸುವದು ನನ್ನಿಂದಾಗದು. ಇದನ್ನು ನೀನು ತಿಳಿದು ನನ್ನನ್ನು ನೀನು ಸಲಹು, ಎಂದು ಬಸವೇಶ್ವರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ.

ಗ್ರಂಥಾಲಯ
ಬಿ. ಎಲ್. ಡಿ. ಇ. ಸಂಸ್ಥೆ
ಕನ್ನಡ ವಿ. ವಿ. ಹಂಪಿಯಿಂದ ಪುಸ್ತಕ ಪಡೆದ
ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ವಿಜಾಪೂರ

(೯೯) ಲಿಂಗ ವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು, ಲಿಂಗವಂತರು ತಾವು ಅಂಜಲೇಕೆ? ಲಿಂಗವಿರಿಸಿದಂತಿಪ್ಪದಲ್ಲದೆ ಮತ್ತೊಂದನ್ನವನರಿಯದಂತಿರಬೇಕು, ಕೂಡಲ ಸಂಗಮ ದೇವ ಭಕ್ತರಭಿಮಾನ ತನ್ನದೆಂಬನಾಗಿ.

ಭಾವ:- ಲಿಂಗಾರ್ಪಿತ ಭಾವದಿಂದ ಆಚರಿಸುವವನ ನಡೆನುಡಿಗಳು ಲಿಂಗವಶದಿಂದ ಬಂದಂಥವುಗಳು. ಆದ್ದರಿಂದ ಲಿಂಗವಂತರು ತಾವು ನಡೆಯುವಲ್ಲಿ ಮತ್ತು ನುಡಿಯುವಲ್ಲಿ ಯಾರಿಗೂ ಅಂಜಬಾರದು. ಅವರು ಪರಮಾತ್ಮನು ತಮ್ಮನ್ನು ಹೇಗೆ ಇಡುತ್ತಾನೋ ಹಾಗೆ ಇದ್ದುದರಲ್ಲಿ ಸಮಾಧಾನಿಗಳಾಗಿ ಸಂತುಷ್ಟರಾಗಿ ಇರಬೇಕು. ಅವರು ಲಿಂಗದ ಹೊರ್ತು ಬೇರೊಂದನ್ನು ಅರಿಯಬಾರದು. ಹೀಗೆ ಭಕ್ತರು ಆಚರಿಸಿದಲ್ಲಿ ಪರಮಾತ್ಮನು ಅವರ ಮಾನಾಪಮಾನವು ತನ್ನದೆಂದು ಭಾವಿಸಿ ಅವರನ್ನು ಕಾಯುತ್ತಾನೆಂದು ಬಸವೇಶ್ವರನ ಅಭಿಪ್ರಾಯವು.

(೧೦೦) ಮರನ ಹುವ್ವ ಕೊಯ್ದು, ಮರಕ್ಕೇರಿಸಿ, ನದಿಯುದಕವ ನದಿಗರ್ಪಿತವ ಮಾಡಿ, ಕರುವನಗಲಿಸಿ ತಾಯ ಮೊಲೆವಾಲ ಮರುಗಿಸಿ ಕರೆದುಣಬೇಡವೋ. ಕೂಡಲ ಸಂಗಮದೇವ ಮಾಡಿದ ಮಾಯೆ ಹಲಬರ ಬಾಯ ಟೊಣೆದು ಹೋಯಿತ್ತು.

ಟೊಣೆ = ಠಕ್ಕಿಸು.

ಭಾವ:— ಬಸವೇಶ್ವರನು ಇಲ್ಲಿ ಹೇಳುವದೇನಂದರೆ:— ನೀವು ಪರಮಾತ್ಮನಲ್ಲಿ ಭಕ್ತಿ ಇಲ್ಲದೆ ಅವನ ಸೇವೆ ಮಾಡುತ್ತೀರಿ. ಇದು ಠಕ್ಕುತನವು. ಯಾಕಂದರೆ ಮರದಲ್ಲಾದ ಹುವ್ವನ್ನು ಮರಕ್ಕೆ ಅರ್ಪಿಸಿ ಮರದ ಪೂಜೆ ಮಾಡುತ್ತೀರಿ. ನದಿಯ ಉದಕವನ್ನು ನದಿಗೆ ಅರ್ಪಿಸಿ ನದಿಯ ಪೂಜೆ ಮಾಡುತ್ತೀರಿ. ಆಕಳ ಕರುವನ್ನು ಅದರ ತಾಯಿಯಿಂದ ದೂರಮಾಡಿ ಆ ಕರುವನ್ನು ಮರುಗಿಸುತ್ತ ಅದರ ಹಾಲನ್ನು ಕರೆಯುತ್ತೀರಿ ಮತ್ತು ಇಂಥ ಹಾಲಿನಿಂದ ಪರಮಾತ್ಮನ ಪೂಜೆಮಾಡಿ ಆ ಹಾಲು ಪ್ರಸಾದವೆಂದು ಅದನ್ನು ನೀವೇ ಉಣ್ಣುತ್ತೀರಿ. ಇವೆಲ್ಲವೂ ಠಕ್ಕುತನವೆಂದು ಬಸವೇಶ್ವರನು ಹೇಳುತ್ತಾನೆ. ಇದೆಲ್ಲ ಮಾಯೆ, ಸುಳ್ಳು. ಆದರೆ ನೀವು ಅನುಭವಿಸುವದನ್ನೆಲ್ಲ ಪರಮಾತ್ಮನಿಗೆ ಹೇಗೆ ಅರ್ಪಿಸಬೇಕೆಂಬುವದನ್ನು ತಿಳಿದು ವರ್ತಿಸಿದ್ದಾದರೆ. ಅದೇ ನಿಜವಾದ ಭಕ್ತಿಯು. ಆ ಭಕ್ತಿಯು ನಿಮಗೆ ಶ್ರೇಷ್ಠ ಸ್ಥಿತಿಯನ್ನು ಅಂದರೆ ಲಿಂಗಾಂಗಸಾಮರಸ್ಯ ಸ್ಥಿತಿಯನ್ನು ತಂದುಕೊಡುವದೆಂದು ಬಸವೇಶ್ವರನು ಹೇಳುತ್ತಾನೆ.